ಕಲ್ಯಾಣ ಕರ್ನಾಟಕದ ಪ್ರತಿಬಿಂಬ......

ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕನ್ನಡ ದಿನಪತ್ರಿಕೆ

ಕೊಪ್ಪಳ | ರಾಯಚೂರು | ಬಳ್ಳಾರಿ | ವಿಜಯನಗರ | ಯಾದಗಿರಿ | ಬೆಂಗಳೂರು | ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ.

ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್,
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 141 | Wednesday 16-10-2024 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

## ಸಂಕ್ಷಿಪ್ತ ವಾರ್ತೆ

### ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಅಕ್ಟೋಬರ್ 17ಕ್ಕೆ

● ವಾರ್ತಾಲೋಕ ವಾರ್ತೆ

**ಹೊಸಪೇಟೆ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತ್ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಕಾರ್ಯಕ್ರಮವು ಅಕ್ಟೋಬರ್ 17ರಂದು ಬೆಳಗ್ಗೆ 10 ಗಂಟೆಗೆ ಹೊಸಪೇಟೆ ಭುವನೇಶ್ವರಿ ನಗರದ ಮಹರ್ಷಿ ವಾಲ್ಮೀಕಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳ ಉಸ್ತುವಾರಿ ಸಚಿವರಾದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅವರು ಉದ್ಘಾಟಿಸುವರು.


ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಹೆಚ್.ಆರ್. ಗವಿಯಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಈ.ತುಕಾರಾಂ ಹಾಗೂ ಡಾ.ಪ್ರಭಾ ಮಲ್ಲಿಕಾರ್ಜುನ,

ಶಾಸಕಾರಾದ ಕೆ.ನೇಮಿರಾಜ ನಾಯ್ಕ, ಎನ್.ಟಿ.ಶ್ರೀನಿವಾಸ್, ಎಲ್.ಕೃಷ್ಣನಾಯಕ, ಎಂ.ಪಿ.ಲತಾ ಮಲ್ಲಿಕಾರ್ಜುನ ಹಾಗೂ ಬಿ.ದೇವೇಂದ್ರಪ್ಪ, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಬಿ.ಪಾಟೀಲ್, ಶಶೀಲ್ ಜಿ. ನಮೋಶಿ ಹಾಗೂ ವೈ.ಎಂ. ಸತೀಶ್, ಹೊಸಪೇಟೆ ನಗರಸಭೆ ಅಧ್ಯಕ್ಷರಾದ ರೂಪೇಶ್ ಕುಮಾರ ಎನ್., ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎನ್.ಎಫ್ ಇಮಾಮ್ ನಿಯಾಜಿ ಅವರು ಹಾಗೂ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಾದ ಶಾಷು ಮೋದಿನ್ ಅವರು ಉಪಸ್ಥಿತರಿರುವರು.

ಅಗ್ನಿಶಾಮಕದಳದ ಡಿ.ಐ.ಜಿ.ಪಿ ಗಳಾದ ರವಿ ಡಿ. ಚನ್ನಣ್ಣನವರ್ ಅವರು ವಿಶೇಷ ಉಪನ್ಯಾಸ ನೀಡುವರು ಎಂದು ಪ್ರಕಟಣೆ ತಿಳಿಸಿದೆ.

### ಕಾಟ್ರಳ್ಳಿ ತಿಪ್ಪೇಸ್ವಾಮಿ ಹೊಲದಲ್ಲಿ ಉಕ್ಕಿದ ಕೊಳವೆಬಾವಿಯ ಜಲ ಧಾರೆ



● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಅ15** ಕಳೆದ ಇಪ್ಪತ್ತು ದಿನಗಳಿಂದ ಸುರಿಯುತ್ತಿರುವ ಮಳೆಯ ಪರಿಣಾಮ ಕೂಡ್ಲಿಗಿ ತಾಲೂಕಿನ ನಾಗರಹುಣಸೆ ಗ್ರಾಮದ ಕಾಟ್ರಳ್ಳಿ ಗೌಡ್ರು ತಿಪ್ಪೇಸ್ವಾಮಿ ಅವರ ಕೊಳವೆ ಬಾವಿಯಲ್ಲಿ ಏಕಾಏಕಿ ನೀರು ಉಕ್ಕಲು ಆರಂಭಿಸಿ ಗ್ರಾಮದ ಜನರಲ್ಲಿ ವಿಸ್ಮಯ ಮೂಡಿಸಿದೆ.

ಕಾಟ್ರಹಳ್ಳ್ಯಾರು ತಿಪ್ಪೇಸ್ವಾಮಿ ಅವರು 4 ವರ್ಷಗಳ ಹಿಂದೆ ತಮ್ಮ ಜಮೀನಿನಲ್ಲಿ 180 ಅಡಿಯಷ್ಟು ಕೊಳವೆ ಬಾವಿ ಕೊರೆಯಿಸಿದ್ದರು. ಅದರಲ್ಲಿ 2 ಇಂಚಿನಷ್ಟು ನೀರು ದೊರೆತಿತ್ತು. ಅದರಲ್ಲೇ ಅವರು ಬೇಸಾಯ ಮಾಡಿಕೊಂಡಿದ್ದರು.

ಶನಿವಾರ ಬೆಳಿಗ್ಗೆ ಅವರು ಜಮೀನಿಗೆ ಹೋದ ವೇಳೆ ಮೋಟರ್ ಆನ್ ಮಾಡದಿದ್ದರೂ ಬೋರವೆಲ್‌ನಲ್ಲಿ ನೀರು ಉಕ್ಕುತ್ತಿರುವುದು ಕಂಡು ಆಶ್ಚರ್ಯಗೊಂಡಿದ್ದಾರೆ.

ಈ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮದ ಜನರು ತಿಪ್ಪೇಸ್ವಾಮಿ ಅವರ ಜಮೀನಿಗೆ ಬಂದು ಕೊಳವೆ ಬಾವಿಯಲ್ಲಿ ನೀರು ಉಕ್ಕುವುದನ್ನು ಪವಾಡದಂತೆ ಕುತೂಹಲದಿಂದ ವೀಕ್ಷಿಸಿದರು.

*‘ಈ?ಬಾರಿ ಉತ್ತಮ ಮಳೆಯಾಗಿರುವ ಕಾರಣ ಕೊಳವೆ ಬಾವಿಗಳು ಮರುಪೂರಣಗೊಂಡಿವೆ. ಇನ್ನು ಎರಡು ವರ್ಷಗಳ ಕಾಲ ನಮಗೆ ಬೇಸಾಯಕ್ಕೆ ಮತ್ತು ಕುಡಿಯುವ ನೀರಿಗೆ ಚಿಂತೆ ಇಲ್ಲ’ ಎಂದು ನಾಗರಹುಣಸೆ ನಿವಾಸಿ ಕೆ.ಟಿ.ಜಗದೀಶ್ ತಿಳಿಸಿದರು.*

ವರದಿ ಹೆಚ್ಚು ವೀರಣ್ಣ.

### ವಾಲ್ಮೀಕಿ ಜಯಂತಿ ಹಿನ್ನೆಲೆ: ಕೂಡ್ಲಿಗಿಯಲ್ಲಿ ಮದ್ಯ ಮಾರಾಟ ನಿಷೇಧಿಸಿ ಆದೇಶ

● ವಾರ್ತಾಲೋಕ ವಾರ್ತೆ

**ಹೊಸಪೇಟೆ ;** ವಾಲ್ಮೀಕಿ ಜಯಂತಿ ಆಚರಣೆ ಪ್ರಯುಕ್ತ ಕೂಡ್ಲಿಗಿ ಪಟ್ಟಣ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಶಾಂತ ರೀತಿಯಿಂದ ಜಯಂತಿ ಆಚರಿಸುವ ಸಲುವಾಗಿ ಅಕ್ಟೋಬರ್ 16ರಂದು ಬೆಳಿಗ್ಗೆ 6 ಗಂಟೆಯಿಂದ ಅಕ್ಟೋಬರ್ 17ರ ರಾತ್ರಿ 12 ಗಂಟೆಯವರೆಗೆ ಕೂಡ್ಲಿಗಿ ಪಟ್ಟಣ ವ್ಯಾಪ್ತಿಯಲ್ಲಿನ ಮದ್ಯದಂಗಡಿ, ಬಾರ್, ರೆಸ್ಟೋರೆಂಟ್ ಮತ್ತು ಇತರೆ ಸ್ಥಳಗಳಲ್ಲಿ ಮದ್ಯ ಮಾರಾಟ ಮಾಡದಂತೆ ಹಾಗೂ ಮದ್ಯದಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

ಈ ಸಮಯದಲ್ಲಿ ಸಾರ್ವಜನಿಕರು ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆ ಮಾಡಿ ಮದ್ಯದ ಅಮಲಿನಲ್ಲಿ ಗಲಾಟೆಗಳು ಆಗುವ ಸಂಭವ ಇರುವ ಕಾರಣದಿಂದಾಗಿ ಅಗತ್ಯ ಕಟ್ಟುನಿಟ್ಟಿನ ಕ್ರಮಗಳನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಹಾಗೂ ಅಬಕಾರಿ ಇಲಾಖೆಯ ಉಪ ಆಯುಕ್ತರು ತೆಗೆದುಕೊಳ್ಳಬೇಕು ಎಂದು ತಿಳಿಸಲಾಗಿದೆ.

## ಪ್ರಗತಿ ಪರಿಶೀಲನಾ ಸಭೆ

# ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಲಿ: ನವೀನ್ ರಾಜ್ ಸಿಂಗ್



● ವಾರ್ತಾಲೋಕ ವಾರ್ತೆ

**ಹೊಸಪೇಟೆ : ಅ15.**ಅಧಿಕಾರಿಗಳು ಸಾಮಾಜಿಕ ಕಾಳಜಿ ಹೊಂದಿ ಕಾರ್ಯನಿರ್ವಹಿಸಬೇಕು. ಆಯಾ ಇಲಾಖೆಗಳ ಯೋಜನೆಗಳ ಅನುಷ್ಠಾನಕ್ಕಾಗಿ ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು ಎಂದು ವಸತಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆಗಿರುವ ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ನವೀನ್ ರಾಜ್ ಸಿಂಗ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಸೋಮವಾರ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಪಡಿತರ ವಿತರಣಾ ವ್ಯವಸ್ಥೆಯ ಬಗ್ಗೆ ಕೇಳಿ, ಪಡಿತರ ಆಹಾರ ಧಾನ್ಯಗಳು ಕಾಳಸಂತೆಯಲ್ಲಿ ಮಾರಾಟವಾಗದಂತೆ ನಿಗಾ ವಹಿಸಬೇಕು ಎಂದು ಆಹಾರ ಇಲಾಖೆಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಗೃಹಜ್ಯೋತಿ ಯೋಜನೆಯಡಿ ಶೇ.90ರಷ್ಟು ಫಲಾನುಭವಿಗಳು ಹೆಸರು ನೋಂದಾಯಿಸಿ ಪ್ರಗತಿಯಾಗಿದೆ ಎಂದು ಅಧಿಕಾರಿಗಳು ವಿವರಿಸಿದರು. ತಾಂತ್ರಿಕ ತೊಂದರೆ ಸರಿಪಡಿಸಿ ಗೃಹಲಕ್ಷ್ಮಿ ಯೋಜನೆಯ ಬಾಕಿ ಕಂತಿನ ಹಣವು ಫಲಾನುಭವಿಗಳಿಗೆ ಬೇಗನೆ ತಲುಪುವ ಹಾಗೆ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ಕಾರ್ಯದರ್ಶಿಗಳು ಸೂಚನೆ ನೀಡಿದರು.

ಈಗಾಗಲೇ ಜೂನ್ ಮಾಹೆವರೆಗೆ ಗೃಹಲಕ್ಷ್ಮಿ ಯೋಜನೆಯ ಸಹಾಯಧನವು ಪಾವತಿಯಾಗಿರುತ್ತದೆ. ಬಾಕಿ ಹಣವನ್ನು ಸಂಬಂಧಿಸಿದ ಫಲಾನುಭವಿಗಳಿಗೆ ಜಮೆ ಮಾಡುವ ಪ್ರಕ್ರಿಯೆ ನಡೆಯುತ್ತಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳಾದ ಎಂ.ಎಸ್. ದಿವಾಕರ ಅವರು ಮಾತನಾಡಿ, ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಬೇಕು. ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳು ದೊರೆಯುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು. ಅಂಗನವಾಡಿ, ಶಾಲಾ, ಕಾಲೇಜು, ಆಸ್ಪತ್ರೆ ಹಾಗೂ ಇತರೆ ನಿರ್ಮಾಣ ಕಾರ್ಯಗಳಿಗೆ ನಿವೇಶನ ಬೇಡಿಕೆ ಮತ್ತು ಮಂಜೂರಾತಿ ಕಾರ್ಯಕ್ಕೆ ಹೆಚ್ಚಿನ ಗಮನ ಕೊಡಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ ಷಾ, ಜಿ.ಪಂ.ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶರಣಪ್ಪ ಮುದುಗಲ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಎಚ್.ವಿ.ಮಂಜುನಾಥ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದಿನ್, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಚಿದಾನಂದಪ್ಪ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ವರದಿ ಅಂಬರೀಶ್ ನಾಯಕ್.

### ವಿಶ್ವ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಕನ್ನಡಿಗರ ಸಾಧನೆ




**ಬೆಂಗಳೂರು, :** ಜರ್ಮನಿಯ ಫ್ರಾಂಕ್‌ಟ್ಸ್‌ಲ್ಲಿಂಯುನೈಟೆಡ್ ವರ್ಲ್ಡ್ ಮಾರ್ಷಲ್ ಆರ್ಟ್ಸ್ ಫೆಡರೇಶನ್ ಹಮ್ಮಿಕೊಂಡಿದ್ದ ಐಸಿಓವರ್ಲ್ಡ್ ಮಾರ್ಷಲ್ ಆರ್ಟ್ಸ್ ಚಾಂಪಿಯನ್‌ಶಿಪ್‌ನಲ್ಲಿ ಕನ್ನಡಿಗರು ಅಮೋಘ ಸಾಧನೆ ಮಾಡಿದ್ದಾರೆ.

ಕಲ್ಬಾಚ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಚಾಂಪಿಯನ್‌ಶಿಪ್‌ನ ಜೂನಿಯರ್ ವಿಭಾಗದಲ್ಲಿ ಕರ್ನಾಟಕದ ಮಾಸ್ಟರ್ ಪ್ರಣವ್ ವಿ.ಎಚ್. ಚಿನ್ನದ ಪದಕ ಗೆದ್ದು ಸಾಧನೆ ಮೆರೆದ್ದಿದ್ದಾರೆ.

ಬೆಂಗಳೂರಿನ ಹಿರಿಯ ತರಬೇತುದಾರರಾದ ರೆನ್ಶಿ ರಾಮನ್ ಗಣೇಶ್ ವಿಭಾಗದ ಕಟಾ ಸ್ಪರ್ಧೆಯಲ್ಲಿ (ಶ್ಯಾಡೋ ಬಾಕ್ಸಿಂಗ್) ಭಾಗವಹಿಸಿ ಕಂಚಿನ ಪದಕಕ್ಕೆ ಭಾಜನರಾಗಿದ್ದಾರೆ.

# ದೇಸಿ ಆಟಗಳಿಂದ ಕ್ರೀಡಾ ಸ್ಫೂರ್ತಿ...

● ವಾರ್ತಾಲೋಕ ವಾರ್ತೆ



**ಕೂಡ್ಲಿಗಿ: ಅ15.** ದೇಸಿ ಆಟಗಳಿಂದ ದೇಹದ ಸ್ವಾಸ್ಥ ?ಯ ಗಟ್ಟಿಮುಟ್ಟಾಗಿರುತ್ತದೆ ಎಂದು ಪ್ರಾದೇಶಿಕ ನಿರ್ದೇಶಕರು, ಕೇಂದ್ರೀಯ ಅಂತರ್ಜಲ ಮಂಡಳಿ(ತೆಲಂಗಾಣ, ಆಂದ್ರಪ್ರದೇಶ)ಜಲಶಕ್ತಿ ಮಂತ್ರಾಲಯ, ಭಾರತ ಸರ್ಕಾರ ಹೈದರಬಾದ್‌ನ ಜಿ. ಕೃಷ್ಣಮೂರ್ತಿ ಇವರು ಅಭಿಪ್ರಾಯಪಟ್ಟರು. ತಾಲೂಕಿನ ಗಂಡಬೊಮ್ಮನಹಳ್ಳಿಯ ಜಿ. ಕೃಷ್ಣಮೂರ್ತಿ ಗೆಳೆಯರ ಚಾರಿಟಬಲ್ ಟ್ರಸ್ಟ್ ನಿಂದ ಜಿಲ್ಲಾ ಮಟ್ಟದ ಮುಕ್ತ ಮ್ಯಾಟ್ ಕಬಡ್ಡಿ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು. ಯುವಕರು ಸದಾ ಕ್ರಿಯಾಶೀಲತೆಯಿಂದ ಇರಬೇಕಾದರೆ, ದೇಸಿ ಆಟಗಳಲ್ಲಿ ಪಾಲ್ಗೊಳ್ಳಬೇಕು, ಇದರಿಂದ ದೇಹವು ಸದಾ ಚಟುವಟಿಕೆಯಿಂದ ಇರುಲು ಸಾಧ್ಯವಾಗುತ್ತದೆ ಎಂದರು. ಕ್ರೀಡೆಗಳಿಂದ ಪರಸ್ಪರ ಸ್ನೇಹ, ಪ್ರೀತಿ, ವಿಶ್ವಾಸಗಳಿಂದ ವೃದ್ಧಿಯಾಗಬೇಕು. ಇತರರಿಗೆ ಮಾದರಿಯಾಗುವಂತೆ ಕ್ರೀಡೆಗಳನ್ನು ಸಂಘಟಿಸುವ ಅಗತ್ಯವನ್ನು ಆಯೋಜಕರು ಅರಿಯಬೇಕು. ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಿಂದ, ಕಬ್ಬಡಿ ಪಂದ್ಯಾವಳಿಯಲ್ಲಿ ಭಾಗವಹಿಸಲು ಅನೇಕ ತಂಡಗಳು ಬಂದಿರುತ್ತವೆ.

ಆಟಗಾರರನ್ನು ಗೌರವಾಧರಗಳೊಂದಿಗೆ ಬರಮಾಡಿಕೊಂಡು, ಇಲ್ಲಿನ ಜನ, ಜೀವನ, ಸಂಸ್ಕೃತಿಯನ್ನು ಅವರಿಗೂ ತಿಳಿಯುವಂತಾಗಬೇಕು. ಇದರಿಂದ ಪಟ್ಟಣ ಮತ್ತು ಹಳ್ಳಿಗಳ ಸಾಮರಾಸ್ಯ ಜೀವನ ವೃದ್ಧಿಯಾಗುತ್ತದೆ. ಮುಂದಿನ ದಿನಗಳಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಗ್ರಾಮೀಣ ಪ್ರದೇಶದ ಯುವಕರು ದೇಸಿ ಕ್ರೀಡೆಯಾದ ಕಬ್ಬಡಿ ಆಟವನ್ನು ಪ್ರದರ್ಶಿಸುವ ಅವಕಾಶ ನಿಮ್ಮದಾಗುತ್ತದೆ ಎಂದರು. ಸಣ್ಣ, ಪುಟ್ಟ ತಪ್ಪುಗಳಿದ್ದರೆ, ಅದನ್ನು ದೊಡ್ಡದು ಮಾಡಿಕೊಂಡು ರಂಪಾಟಮಾಡುವುದು ಬದಲಾಗಬೇಕು. ಸದಾ ಕ್ರೀಡಾ ಸ್ಫೂರ್ತಿಯಿಂದ ಪ್ರತಿಯೊಬ್ಬರು ಮೆರೆಯಬೇಕು. ಇಂದಿನ ಪೀಳಿಗೆಯನ್ನು ನೋಡಿ ಅನುಸರಿಸುವಂತಾಗಬೇಕು ಎಂದು ಟಿ. ಕೃಷ್ಣಮೂರ್ತಿ ನೆರದಿರುವ ಕ್ರೀಡಾಪಟುಗಳಿಗೆ ಮನವರಿಕೆ ಮಾಡಿದರು. ಕಬ್ಬಡಿ ಪಂದ್ಯಾವಳಿ ನಡೆಯಲು ಸಹಕಾರ ನೀಡಿದ ಸಮವಸ್ತ್ರ ದಾನಿಗಳಿಗೆ, ಟ್ರೋಫಿಗಳ ಪ್ರಾಯೋಜಕರಿಗೆ, ಭೂ ದಾನಿಗಳಿಗೆ, ಗುಡೇಕೋಟೆಯ ಆರಕ್ಷಕ ಸಿಬ್ಬಂದಿ ವರ್ಗದವರಿಗೆ ನೆನಪಿನ ಕಾಣಿಕೆಯನ್ನು ನೀಡುವುದರ ಮೂಲಕ ಗೌರವಿಸಲಾಯಿತು. ಪ್ರಥಮ ಬಹುಮಾನ 20,001 ದ್ವಿತೀಯ ಬಹುಮಾನ10000 ತೃತೀಯ ಬಹುಮಾನ 5000 ಮತ್ತು ಆಕರ್ಷಕ ಟ್ರೋಫಿಯನ್ನು ಗೆದ್ದ ತಂಡಗಳಿಗೆ ಮಂಗಳವಾರ ಸಂಜೆ ಇತರಸಲಾಗುವುದು ಎಂದು ಕಾರ್ಯಕ್ರಮದ ಆಯೋಜಕರು ತಿಳಿಸಿದರು.

ವರದಿ ಎಚ್ ವೀರಣ್ಣ.

### ಕಿತ್ತೂರು ಜ್ಯೋತಿ ರಥ ಯಾತ್ರೆಗೆ ಅದ್ದೂರಿ ಸ್ವಾಗತ



**ಬಾಗಲಕೋಟೆ:** ಕಿತ್ತೂರ ಉತ್ಸವ–2024ರ ಅಂಗವಾಗಿ ರಾಜ್ಯಾದ್ಯಂತ ಸಂಚ–ರಿಸುತ್ತಿರುವ ಕಿತ್ತೂರು ಜ್ಯೋತಿ ರಥ ಯಾತ್ರೆ ಮಂಗಳವಾರ ಬಾಗಲಕೋಟೆಗೆ ಆಗಮಿಸಿದ್ದು, ಜಿಲ್ಲಾಡಳಿತದಿಂದ ಅದ್ದೂ–ರಿಯಾಗಿ ಸ್ವಾಗತಿಸಲಾಯಿತು.

ಜಿಲ್ಲಾಡಳಿತಕ್ಕೆ ಆಗಮಿಸುತ್ತಿದ್ದಂತೆ ವಿವಿಧ ಜಾನಪದ ಕಲಾತಂಡಗಳಿಂದ ಅದ್ದೂ–ರಿಯಾಗಿ ಸ್ವಾಗತಿಸಲಾಯಿತು. ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ ಕಿತ್ತೂರು ಚನ್ನಮ್ಮ ಪುತ್ಥಳಿಗೆ ಹೂ ಮಾಲಾರ್ಪಣೆ ಮಾಡಿ ನಂತರ ಜ್ಯೋತಿ ಬೆಳೆಗಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ತಹಶೀಲ್ದಾರ ಅಮರೇಶ ಪಮ್ಮಾರ, ಸಮುದಾಯ ಮುಖಂಡರಾದ ರವಿ ಪಟ್ಟಣದ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮುದಾಯ ಬಾಂದವರು ಉಪಸ್ಥಿತರಿದ್ದರು.

# ವೀರಶೈವ ಒಳಪಂಗಡಗಳು ಒಗ್ಗಟ್ಟು ಪ್ರದರ್ಶಿಸಿ ಸಮಾಜದ ಮುಖ್ಯ ವಾಹಿನಿಗೆ ಬರಬೇಕು ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಗುಂಡುಮನಗು ತಿಪ್ಪೇಸ್ವಾಮಿ

● ವಾರ್ತಾಲೋಕ ವಾರ್ತೆ



**ಕೂಡ್ಲಿಗಿ: ಅ15** ವೀರಶೈವ ಒಳ ಪಂಗಡಗಳು ಒಗ್ಗಟ್ಟನ್ನು ಪ್ರದರ್ಶಿಸಿ ಸಮಾಜದ ಮುಖ್ಯವಾಹಿನಿಗೆ ಬರಬೇಕಿದೆ ಎಂದು ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ಅಖಿಲ ಭಾರತ ಲಿಂಗಾಯತ ವೀರಶೈವ ಮಹಾಸಭಾದ ತಾಲೂಕು ಗೌರವಾಧ್ಯಕ್ಷ ಗುಂಡುಮುಣುಗು ಕೆ.ತಿಪ್ಪೇಸ್ವಾಮಿ ಮನವಿ ಮಾಡಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಅಖಿಲ ಭಾರತ ಲಿಂಗಾಯತ ವೀರಶೈವ ಮಹಾಸಭಾದ ತಾಲೂಕು ಪದಾಧಿಕಾರಿಗಳ ಪದಗ್ರಹಣ ಸಭೆಯಲ್ಲಿ ಮಾತನಾಡಿದರು. ಲಿಂಗಾಯತ ಒಳ ಪಂಗಡಗಳು ಒಂದಾದರೆ ವೀರಶೈವ ಸಮಾಜಕ್ಕೆ ಒಂದು ಬಹುದೊಡ್ಡ ಶಕ್ತಿ ಬಂದಂತಾಗುತ್ತದೆ. ಇದರಿಂದ ನಾವುಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಬೆಳೆಯಲು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ನಾವುಗಳು ಮೊದಲು ಸಂಘಟಿತರಾಗಬೇಕಿದೆ, ಅದಕ್ಕೆ ನಾವುಗಳು ಪ್ರಥಮವಾಗಿ ಸದಸ್ಯತ್ವವನ್ನು ಕಡ್ಡಾಯವಾಗಿ ಮಾಡಿಸಬೇಕು. ಅದರಂತೆ ಪ್ರತಿ ತಿಂಗಳು ನಾಲ್ಕನೇ ಭಾನುವಾರ ಹೋಬಳಿ ಹಾಗೂ ಗ್ರಾಮಗಳ ಮಟ್ಟದಲ್ಲಿ ಸಭೆ ನಡೆಸಿ ಸದಸ್ಯತ್ವ ತಗೆದುಕೊಳ್ಳಬೇಕು. ಅಲ್ಲದೆ ಪಟ್ಟಣ ಸೇರಿದಂತೆ ಅನೇಕ ಗ್ರಾಮಗಳಲ್ಲಿ ವೀರಶೈವ ರುದ್ರಭೂಮಿಗಳಿಲ್ಲ ಆ ಬಗ್ಗೆ ಸ್ಥಳೀಯ ಆಡಳಿತಕ್ಕೆ ಮನವರಿಕೆ ಮಾಡಿ ರುದ್ರಭೂಮಿ ಮಂಜೂರು ಮಾಡಿಸಬೇಕು ಎಂದರು. ತಾಲೂಕಿನಲ್ಲಿ ಅಂದಾಜು 45 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇರುವ ವೀರಶೈವರು ಈ ಮುಖೇನ ಒಗಟ್ಟಾಗಬೇಕು ಎಂದು ಕರೆ ನೀಡಿದರು.

ಸಭೆಯ ಅಧ್ಯಕ್ಷತೆವಹಿಸಿ ಕೆ.ಸುನೀಲ್ ಗೌಡ ಮಾತನಾಡಿ, ಶೀಘ್ರದಲ್ಲೇ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ನೂತನ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಗುವುದು. ಪಟ್ಟಣದ ವೀರಶೈವ ರುದ್ರಭೂಮಿಗೆ ಸಿಸಿ ರಸ್ತೆ ಸೇರಿದಂತೆ ಮೂಲ ಸೌಕರ್ಯಗಳ ಒತ್ತು ನೀಡಲು ಸಂಬಂಧಿಸಿದ ಇಲಾಖೆಗೆ ಮನವಿ ಪತ್ರ ಸಲ್ಲಿಸಲಾಗುವುದು.

ಅದರಂತೆ ಅನೇಕ ಗ್ರಾಮಗಳಲ್ಲಿ ರುದ್ರಭೂಮಿ ಸಮಸ್ಯೆ ಸೇರಿದಂತೆ ಸಮಾಜದ ಅನೇಕರಿಗೆ ಸರ್ಕಾರದ ಸವಲತ್ತುಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದ ಅವರು, ಪಟ್ಟಣದಲ್ಲಿ ವೀರಶೈವ ಮಹಾಸಭಾದ ಕಚೇರಿಯನ್ನು ಸ್ಥಾಪನೆ ಮಾಡಿ ಸಮಾಜದ ಪರವಾಗಿ ಗಟ್ಟಿದನಿಯಾಗಿ ಕಾರ್ಯ ನಿರ್ವಹಿಸಲು ಮುಂದಾಗುವುದಾಗಿ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಅಖಿಲ ಭಾರತ ಲಿಂಗಾಯತ ವೀರಶೈವ ಮಹಾಸಭಾದ ತಾಲೂಕು ಗೌರವಾಧ್ಯಕ್ಷರಾಗಿ ಗುಂಡುಮುಣುಗು ಕೆ.ತಿಪ್ಪೇಸ್ವಾಮಿ, ಕೆ.ಸುನೀಲ್ ಗೌಡ( ಅಧ್ಯಕ್ಷ), ಜಿ.ಎಸ್.ಗಿರೀಶ್ (ಪ್ರಧಾನ ಕಾರ್ಯದರ್ಶಿ), ಎಂ .ಮರುಳಸಿದ್ದಪ್ಪ(ಕೋಶಾಧ್ಯಕ್ಷ), ಕೆ.ಎಸ್.ವೀರೇಶ್, ಶೆಟ್ರು ಬಸವರಾಜ, ಎಂ.ಮಂಜುನಾಥ, ನಾಗರಾಜ ಕೊಟ್ರಪ್ಪನವರ್, ವೀರೇಶ್ ಅಂಗಡಿ, (ಉಪಾಧ್ಯಕ್ಷರುಗಳಾಗಿ), ಬಣಕಾರ ಮೂಗಪ್ಪ, ಟಿ.ಎಚ್.ಎಂ.ಶೇಖರಯ್ಯ, ಕೆ.ಎಚ್.ಎಂ.ವಿಶ್ವನಾಥ, ವೀರಮ್ಮ ಕೊಟ್ರೇಶ್, ಪ್ರತಿಭಾ ವಿಜಯಕುಮಾರ್, ಕೆ.ಎಚ್.ಎಂ.ಶೈಲಜಾ( ಕಾರ್ಯದರ್ಶಿಗಳಾಗಿ), ಪಿ. ಜಯರಾಜ್, ಜೆ.ಬಸವರಾಜ ( ಸಹ ಕಾರ್ಯದರ್ಶಿಗಳಾಗಿ) ಪದಗ್ರಹಣ ಮಾಡಿದರು. ಅಖಿಲ ಭಾರತ ಲಿಂಗಾಯತ ವೀರಶೈವ ಮಹಾಸಭಾದ ಜಿಲ್ಲಾ ಉಪಾಧ್ಯಕ್ಷ ಎಂ.ಗುರುಸಿದ್ದನ ಗೌಡ, ಜಿಲ್ಲಾ ನಿರ್ದೇಶಕರಾದ ಕೋಗಳಿ ಮಂಜುನಾಥ, ಬಣವಿಕಲ್ಲು ನಾಗರಾಜ ಇದ್ದರು.

ವರದಿ ಹೆಚ್ಚು ವೀರಣ್ಣ.

# ಉಜ್ಜಯಿನಿ ಶ್ರೀಗಳಿಂದ ಕೊಟ್ಟೂರು ಕೆರೆಗೆ ಬಾಗೀನ ಸಮರ್ಪಣೆ





● ವಾರ್ತಾಲೋಕ ವಾರ್ತೆ

**ಕೊಟ್ಟೂರು:** ತಾಲೂಕು ಹಸಿರಿನಿಂದ ಕಂಗೊಳಿಸುವಂತೆ ಮಾಡಲು ಕೊಟ್ಟೂರು ಕೆರೆ ಪ್ರತಿ ವರ್ಷ ತುಂಬಬೇಕು. ಹತ್ತಿರದಲ್ಲಿನ ತುಂಗಭದ್ರ ನೀರಿನ ಸೌಕರ್ಯ ಪಡೆದು ಕೆರೆ ತುಂಬಿಸುವ ಯೋಜನೆ ಜಾರಿಗೆಗೊಳ್ಳಬೇಕು. ಶಾಸಕರು ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಉಜ್ಜಯನಿ ಪೀಠದ ಜಗದ್ಗುರು ಸಿದ್ದಲಿಂಗ ರಾಜ ದೇಶೀ ಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ಕೊಟ್ಟೂರು ಕೆರೆ ತುಂಬಿ ಕೋಡಿ ಬಿದ್ದ ಹಿನ್ನಲೆಯಲ್ಲಿ ಮಂಗಳವಾರ ಮಹಿಳೆರಿಗೆ ಉಡಿ ತುಂಬವ ಕಾರ್ಯಕ್ರಮ ಹಾಗೂ ಕೆರೆ ಬಾಗೀನ ಅರ್ಪಿಸುವ ಕಾರ್ಯಕ್ರಮದಲ್ಲಿ ಹಗರಿಬೊಮ್ಮನಹಳ್ಳಿ ಶಾಸಕ ಕೆ.ನೇಮಿರಾಜ ನಾಯ್ಕ, ಎಂ.ಎಂ. ಜೆ. ಹರ್ಷವರ್ಧನ ಜೊತೆಗೆ ಸೇರಿ ಕೆರೆಗೆ ಬಾಗೀನ ಸಮರ್ಪಿಸಿ ಉಜ್ಜಯನಿ ಪೀಠದ ಜಗದ್ಗುರು ಸಿದ್ದಲಿಂಗ ರಾಜ ದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಮಾತನಾಡಿದರು.

ಕೊಟ್ಟೂರು ಸೇರಿದಂತೆ 17 ಕೆರೆಗಳಿಗೆ ತುಂಗಭದ್ರ ಜಲಾಶಯದಿಂದ ನೀರು ತುಂಬಿಸುವ ಕಾರ್ಯವನ್ನು ಸರ್ಕಾರ ಕೈಗೊಳ್ಳಬೇಕು. ಪೂರ್ಣ ಮಳೆಯಾಶ್ರಿತ ಪ್ರದೇಶವಾಗಿರುವ ಕೊಟ್ಟೂರು ಕೆರೆ ಭರ್ತಿಯಾಗಿ ಕೋಡಿ ಬಿದ್ದಿದ್ದು ಕೆರೆಯಲ್ಲಿನ ನೀರನ್ನು ಉಳಿಸಿಕೊಳ್ಳುವ ಯೋಜನೆ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು .

ಬಾಗೀನ ಸಮರ್ಪಿಸಿ ಶಾಸಕ ಕೆ.ನೇಮಿರಾಜ ನಾಯ್ಕ್ ಮಾತನಾಡಿ ನಾನು ಮೊದಲನೇ ಬಾರಿಗೆ ಶಾಸಕರಾಗಿದ್ದ ಅವಧಿಯ 2009 ರಲ್ಲಿ ಕೊಟ್ಟೂರು ಕೆರೆ ತುಂಬಿ ಕೋಡಿ ಸಹ ಬಿದ್ದಿತ್ತು ಈಗ ಮತ್ತೆ ಶಾಸಕನಾಗಿದ್ದೇನೆ ಈ ವರ್ಷವೂ ಕೊಟ್ಟೂರು ಕೆರೆಗೆ ಕೋಡಿ ಬಿದ್ದಿರುವುದು ನನ್ನ ಶಾಸಕತ್ವದ ಸಾರ್ಥಕತೆಯಾಗಿದೆ ಎಂದರು. ಶಾಶ್ವತ ನೀರು ತುಂಬಿಸುವ ಕಾರ್ಯಯೋಜನೆ ಸಿದ್ದಗೊಳಿಸಿದ್ದು ಕೇಂದ್ರ ಸಚಿವರುಗಳನ್ನು ಸಂಪರ್ಕಿಸಿ ಕೆರೆ ತುಂಬಿಸುವ ಯೋಜನೆ ಬಗ್ಗೆ ಚರ್ಚಿಸುವ ಮೂಲಕ ಕೇಂದ್ರ ಸರ್ಕಾರದ ಅನುದಾನವನ್ನು ಪಡೆಯಲು ಪ್ರಯತ್ನ ನಡೆದಿದೆ. ದೆಹಲಿಗೆ ನಿಯೋಗದ ಮೂಲಕ ತೆರಳುವೆ ಎಂದರು .

ಚಾನುಕೋಟಿ ಮಠಾಧ್ಯಕ್ಷ ಡಾ. ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಜೀ ಮಾತನಾಡಿ ಕೊಟ್ಟೂರೇಶ್ವರನ ಮೂರ್ತಿಯನ್ನು ರಾಮ ಲಿಂಗೇಶ್ವರ ದೇವಸ್ಥಾನದಲ್ಲಿ ಇರಿಸಲಾಗಿರುತ್ತದೆ. ಬೆಳಿಗ್ಗೆ ವಾದ್ಯಗಳೊಂದಿಗೆ ಗಂಗಾ ಮತಸ್ಥರು ಹಾಗೂ ರಾಮಲಿಂಗೇಶ್ವರ ದೈವಸ್ಥರು ಕೆರೆಗೆ ತಂದು ಅಭಿಷೇಕ ಮಾಡಿ ನಂತರ ಗಂಗಾ ಮಾತೆಗೆ ಪೂಜೆ ಸಲ್ಲಿಸಲಾಗುವುದು. ನಂತರ ಬಾಗಿನ ಸಮರ್ಪಣೆ ಮಾಡಿ ಮಹಿಳೆಯರಿಗೆ ಉಡಿ ತುಂಬಲಾಗುವುದು ಎಂದರು.

ಜಿ.ಪಂ ಮಾಜಿ ಸದಸ್ಯ, ಎಂ.ಎಂ. ಜೆ ಹರ್ಷವರ್ಧನ್ ಮಾತನಾಡಿ ಶಾಸಕರು ಯಾವುದಾದರೂ ಅನುದಾನದಲ್ಲಿ ಕೆರೆಯ ಸುತ್ತಮುತ್ತಲಿನ ಮುಳ್ಳು ಗಂಟಿಗಳನ್ನು ತೆಗಿಸಬೇಕು. ಕೊಟ್ಟೂರು ಕೆರೆಗೆ ಸುಗಮದಾರಿ ನಿರ್ಮಾಣವಾಗಬೇಕು. ನಾಗರೀಕರು ಕೆರೆಯನ್ನು ನೋಡಲು ಬರುವವರಿಗೆ ಸೂಕ್ತವಾದ ದಾರಿ ಇಲ್ಲ. ಅಲ್ಲದೆ ಕೆರೆಯ ಸಮಗ್ರ ಅಭಿವೃದ್ಧಿಗೆ ಸರ್ಕಾರ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದರು.

ನಂದಿಪುರದ ಮಹೇಶ್ವರ ಸ್ವಾಮೀಜಿ, ತಹಶೀಲ್ದಾರ ಅಮರೇಶ್ ಜಿ.ಕೆ, ಸಣ್ಣ ನೀರಾವರಿ ಇಲಾಖೆಯ ಎ.ಇ.ಇ ಸೂಗಪ್ಪ, ಸಹಾಯಕ ಇಂಜಿನಿಯರ್ ರಾಜು ಮೇಡಂ , ಪ.ಪಂ ಮುಖ್ಯ ಅಧಿಕಾರಿ ನಸುರುಲ್ಲಾ , ಎಮ್.ಎಮ್.ಜೆ.ಶೋಬಿತ್, ಬೂದಿ ಶಿವಕುಮಾರ ಅಡಿಕೆ ಮಂಜುನಾಥ, ಮರಬದ ನಾಗರಾಜ, ರಾಂಪುರ ಪ್ರಕಾಶ, ರುದ್ರಮ್ಮ ಮಾತೆ, ಗೋಣಿಪ್ಪ, ಮೈದೂರು ವಿಶ್ವನಾಥ , ಪಿ.ಡಬ್ಲ್ಡಿ ಸಹಾಯಕ ಇಂಜಿನಿಯರ್ ಕೊಟ್ರೇಶ್, ಸಬ್ ಇನ್ಸ್ ಪೆಕ್ಟರ್ ಗೀತಾಂಜಲಿ ಸಿಂಧೆ, ತಗ್ಗಿನಕೇರಿ ಕೊಟ್ರೇಶ್, ಶಿವಕುಮಾರ ಮತ್ತಿತರರು ಭಾಗವಹಿಸಿದ್ದರು.

# ಬಳಗಾನೂರ ಕ್ರಷಿ ಪತ್ತಿನ ಸಹಕಾರಿ ಸಂಘದ ನೂತನ ಅಧ್ಯಕ್ಷರಾಗಿ ಪ್ರಭುರಾಜ ಗೂಳರಡ್ಡಿ. ಉಪಾಧ್ಯಕ್ಷರಾಗಿ ಹನಮಪ್ಪ ಗಾಣಿಗೇರ ಅವಿರೋಧವಾಗಿ ಆಯ್ಕೆ



● ವಾರ್ತಾಲೋಕ ವಾರ್ತೆ

**ಗದಗ: ಅ15.** ಗದಗ ತಾಲೂಕಾ ಬಳಗಾನೂರ ಗ್ರಾಮದ ಕ್ರಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಿತು.

ಸಂಘದ ಅಧ್ಯಕ್ಷರಾಗಿ ಪ್ರಭುರಾಜ ಶರಣಪ್ಪಬಸಪ್ಪ. ಗೂಳರಡ್ಡಿ ಉಪಾಧ್ಯಕ್ಷರಾಗಿ ಹನಮಪ್ಪ ಚನ್ನಪ್ಪ.ಗಾಣಿಗೇರ ಅವರು ಅವಿರೋಧವಾಗಿ ಆಯ್ಕೆಯಾದರು..

ಈ ಸಂದರ್ಭದಲ್ಲಿ ಮಾಜಿ ತಾ.ಪಂ.ಸದಸ್ಯರು ಹಾಗೂ ಬಳಗಾನೂರ ಗ್ರಾಮದ ಬಿಜೆಪಿ ಹಿರಿಯ ಮುಖಂಡರಾದ ಶ್ರೀ ಶೇಖಪ್ಪ ಅಗಸಿಮನಿ ಮಾತನಾಡಿ ಬಳಗಾನೂರ ಗ್ರಾಮದ ಕ್ರಷಿ ಪತ್ತಿನ ಸಹಕಾರಿ ಸಂಘದ ಪ್ರಸಕ್ತ ಸಾಲಿಗೆ ನಡೆದ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ಬೆಂಬಲಿತ ಅಭ್ಯರ್ಥಿಗಳು 12ಕ್ಕೆ 12 ಜನ ಜಯಭೇರಿಯಾಗಿದ್ದು ಐತಿಹಾಸಿಕ ಬೆಳವಣಿಗೆಯಾಗಿದೆ. ಕಳೆದ 1977ನೇ ಸಾಲಿನಲ್ಲಿ ಚುನಾವಣೆ ನಡೆದಿತ್ತು.ಆದರೆ ಅಂದಿನಿಂದ ಇಂದಿನವರೆಗೆ ಅಂದರೆ ಸುಮಾರು 47ವರ್ಷದ ಬಳಿಕ ಪ್ರಸಕ್ತ ಸಾಲಿನಲ್ಲಿ ಚುನಾವಣೆ ನಡೆದಿರುವದು ಐತಿಹಾಸಿಕ ಬೆಳವಣಿಗೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯ್ತಿ ಸದಸ್ಯರು ಬಿಜೆಪಿ ಮುಖಂಡರಾದ ಶ್ರೀ ಆರ್ ಎನ್.ಪಾಟೀಲ ಮಾತನಾಡಿ ಗ್ರಾಮದಲ್ಲಿ ಸಂಘದ ಸದಸ್ಯರು ಹಿಂದಿನಿಂದಲೂ ಹಲವಾರು ರೈತಪರ ಕೆಲಸಗಳನ್ನು ಮಾಡುತ್ತಾ ಬಂದಿರುತ್ತಾರೆ ಹಾಗಾಗಿ ಚುನಾವಣೆಗೆ ಹೋಗುವ ಅವಶ್ಯಕತೆ ಇರುತ್ತಿರಲಿಲ್ಲ.ಇವಾಗಲೂ ಸಹಿತ ಚುನಾವಣೆ ಎದುರಿಸುವ ಪ್ರಮೇಯ ಇರುತ್ತಿರಲಿಲ್ಲ ಆದರೆ ಕೆಲವು ಕಾಣದ ಕೈಗಳು ವಿರೋಧ ಪಕ್ಷದವರು ಸಂಘದ ಕ್ರಷಿ ಪತ್ತಿನ ಸಹಕಾರಿ ಸಂಘದ ಬೆಳವಣಿಗೆಯನ್ನು ಸಹಿಸಲಾಗದೇ ಕುತಂತ್ರಿ ರಾಜಕಾರಣ ಮಾಡಲು ಮುಂದಾದರು.

ಆದರೆ ಬಳಗಾನೂರ ಗ್ರಾಮದ ರೈತ ಬಾಂಧವರು ಕಾಂಗ್ರೆಸ್ನವರ ಕುತಂತ್ರಕ್ಕೆ ಬಲಿಯಾಗದೇ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ಸಾಮಾಜಿಕ ಕಳಕಳಿ ರೈತರ ಬಗೆಗಿನ ಖಾಳಜಿ ಹಾಗೂ ನಮ್ಮೆಲ್ಲರ ನೆಚ್ಚಿನ ನಾಯಕರು. ನರಗುಂದ ಮತಕ್ಷೇತ್ರದ ಜನಪ್ರೀಯ ಶಾಸಕರಾದ ಸನ್ಮಾನ್ಯ ಶ್ರೀ ಸಿ ಸಿ.ಪಾಟೀಲ ಸಾಹೇಬರ ಅಭಿವೃದ್ದಿ ಕಾರ್ಯಗಳನ್ನು ಮೆಚ್ಚಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಿಗೆ ಮಣೆ ಹಾಕಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನೂತನವಾಗಿ ಕ್ರಷಿ ಪತ್ತಿನ ಸಂಘದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಶ್ರೀ ಪ್ರಭುರಾಜ ಗೂಳರಡ್ಡಿ ಮಾತನಾಡಿ ಪಕ್ಷದ ಮುಖಂಡರು ಹಾಗೂ ಸಂಘದ ಸದಸ್ಯರು ನನ್ನ ಮೇಲಿ ವಿಶ್ವಾಸವನ್ನಿಟ್ಟು ಅತ್ಯಂತ ದೊಡ್ಡ ಜವಾಬ್ದಾರಿಯನ್ನ ನೀಡಿದ್ದಾರೆ ಅದಕ್ಕೆ ಚ್ಯುತಿ ಬರದೇ ಎಲ್ಲ ಸಂಘದ ಸದಸ್ಯರನ್ನ ಪಕ್ಷದ ಮುಖಂಡರನ್ನ ವಿಶ್ವಾಸಕ್ಕೆ ತೆಗೆದುಕೊಂಡು ಪ್ರಾಮಾಣಿಕ ವಾಗಿ ರೈತರ ಅಭಿವ್ರದ್ದಿಗಾಗಿ ಶ್ರಮಿಸುತ್ತೇವೆ ಎಂದು ಹೇಳಿದರು.

ನೂತನ ಉಪಾಧ್ಯಕ್ಷರಾದ ಹನಮಪ್ಪ ಗಾಣಿಗೇರ ಮಾತನಾಡಿ ಪಕ್ಷದ ಹಿರಿಯರ ಮತ್ತು ಸಂಘದ ಸರ್ವಸದಸ್ಯರ ಸಲಹೆಯ ಮೇರೆಗೆ ಗ್ರಾಮದ ರೈತರ ಅಭಿವ್ರದ್ದಿ ಕೆಲಸ ಮಾಡುತ್ತೇವೆಂದು ಹೇಳಿದರು.

ಈ ಸಂದರ್ಭದಲ್ಲಿ ಬಳಗಾನೂರ ಗ್ರಾಮದ ಕ್ರಷಿ ಪತ್ತಿನ ಸಹಕಾರಿ ಸಂಘದ ಸದಸ್ಯರಾದ ಶ್ರೀ ಶಂಕರಗೌಡ ಶಿ.ಕಾಶೀಗೌಡ್ರ.ಶೇಖಪ್ಪ ಎಸ್. ಅಗಸಿಮನಿ.ಬಸನಗೂಡ ಎಸ್.ಪಾಟೀಲ.ಡಾ.ಶಿವಕುಮಾರ ಎಸ್.ಹಿರೇಮಠ.ಶ್ರೀ ನಿಂಗಪ್ಪ ಬಾ.ಮಡಿವಾಳರ.ಶ್ರೀ ಹುಲ್ಲಪ್ಪ ಮ.ಚಲವಾದಿ.ಸಂಗಪ್ಪ ತೋ. ಚವಡಿ.ತಿಪ್ಪಣ್ಣ ಸ.ಕರಿಭರಮಣ್ಣವರ.ಶ್ರೀಮತಿ ಸರೋಜವ್ವ ಸಂ.ಕಡ್ಲಿ.ಶ್ರೀ ಮತಿ. ಮುತ್ತವ್ವ ಪ.ಮಾಗುಂಡನವರ. ಹಾಗೂ ಬಿಜೆಪಿ ಹಿರಿಯ ಮುಖಂಡರು ಗ್ರಾಮ ಪಂಚಾಯ್ತಿ ಸದಸ್ಯರಾದ ವೇದಮೂರ್ತಿ ಶ್ರೀ ಚನ್ನಯ್ಯ ಶಾಂತಯ್ಯನಮಠ. ಗ್ರಾಮ ಪಂಚಾಯ್ತಿ ಸದಸ್ಯರಾದ ಶ್ರೀ ಹನಮಪ್ಪ ಕಮಲ್ದಿನ್ನಿ.ಬಿಜೆಪಿ ಮುಖಂಡರಾದ ಶರಣಪ್ಪ ಚಟ್ರಿ. ಅಂದಪ್ಪ ಬೆಟಗೇರಿ ಪರಸಪ್ಪ ಕರಡ್ಡಿ.ಹನಮರಡ್ಡಿ ಕರಡ್ಡಿ ಪ್ರಕಾಶ ಮಡಿವಾಳರ. ಬಸವರಾಜ ಚಲವಾದಿ. ಮಂಜುನಾಥ ಪಾಟೀಲ.ದಾದಾಸಾಹೇಬ ಮುಲ್ಲಾ ಇಸ್ಮಾಯಿಲಸಾಬ ಮುಲ್ಲಾ. ಶಶಿಧರ ಗೂಳರಡ್ಡಿ.ಬಸವರಾಜ ಚವಡಿ. ಮಂಜುನಾಥ ಆರಬಳ್ಳಿನ. ಮಕ್ತುಮಹುಸೇನ ಮುಲ್ಲಾ ಪ್ರದೀಪ ಗಾಣಿಗೇರ.ಚಂದ್ರು ಕಲಕೇರಿ.ಹನಮಂತ ಚಲವಾದಿ. ಹನಮಂತ ನಡುವಿನಮನಿ. ಸುರೇಶ ಚಲವಾದಿ ಹಾಗೂ ಕ್ರಷಿ ಪತ್ತಿನ ಸಹಕಾರಿ ಸಂಘದ ಚುನಾವಣಾಧಿಕಾರಿ ಶ್ರೀಮತಿ ಶಾಂತಾ ಎಂ.ಎಚ್.ಮುಖ್ಯ ಕಾರ್ಯದರ್ಶಿ ಶ್ರೀ ಅಪ್ಪಣ್ಣ ಶಿವನಪ್ಪನವರ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ವರದಿ ಬಸವರಾಜ್.

# ನೀರಿನ ಸಮರ್ಪಕ ಬಳಕೆಗೆ ಜನಜಾಗೃತಿ ಅಗತ್ಯ




**ಧಾರವಾಡ, :** ನೀರು ಸಮಸ್ತ ಜೀವಿಗಳ ಜೀವಾಳ.ಭಾರತದಲ್ಲಿ ನೀರಿನಅವೈಜ್ಞಾನಿಕ ಬಳಕೆಯಿಂದ ಭವಿಷ್ಯದಲ್ಲಿಆತಂಕ ಸೃಷ್ಠಿಯಾಗಲಿದೆಎಂದುಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕಡಾ.ಎಸ್.ಎಸ್. ಅಂಗಡಿಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಪ್ರೊ.ಶಿವರಾಜ ಅಮೃತಪ್ಪ ಹೊಸಮನಿ ದತ್ತಿ ಸಂಸ್ಮರಣಾಕಾರ್ಯಕ್ರಮದಲ್ಲಿ ಕೃಷಿಯಲ್ಲಿ ನೀರಿನ ಸದ್ಬಳಕೆ' ವಿಷಯಕುರಿತುಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು. ಭಾರತದಲ್ಲಿ ನೀರಿನ ವೈಜ್ಞಾನಿಕ ಬಳಕೆ ಸಾಕಷ್ಟು ಸಮರ್ಪಕವಾಗಿಲ್ಲ. ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ದುರ್ಬಳಕೆಯಿಂದ ಭೂಮಿಯ ಫಲವತ್ತತೆಕಡಿಮೆಯಾಗಿ ಬೆಳೆ ಹಾನಿಯಾಗುತ್ತಿದೆ.ಭೂಮಿ ಜವುಳಾಗಿ ಮಣ್ಣಿನ ಸವೆತಉಂಟಾಗುತ್ತಿದೆ.ನೀರಿನ ಸದ್ಬಳಕೆಗಾಗಿ ರೈತರುತಾವು ಸಾಗುವಳಿ ಮಾಡುತ್ತಿರುವಜಮೀನಿನ ಸುತ್ತಲೂ ನೀರು ಬಸಿದು ಹೋಗಲು ಕಂದಕಗಳ ನಿರ್ಮಾಣ ಮಾಡಬೇಕು. ಹೊಲಗಳಲ್ಲಿ ಮಣ್ಣು ಸವೆತವನ್ನುತಡೆಯಲು ಬದುಗಳ ನಿರ್ಮಾಣ ಹಾಗೂ ಕೆರೆಗಳ ನಿರ್ಮಾಣ ಮಾಡುವುದುಅಗತ್ಯವಾಗಿದೆ. ನೀರಿನ ಸಮರ್ಪಕ ಬಳಕೆಗೆ ಜನಜಾಗೃತಿ–ಅಗತ್ಯವಾಗಿದೆ. ರೈತರು ನೀರಿನದುಂದುವೆಚ್ಚ ಮಾಡದೇ ಬೆಳೆ ಪದ್ಧತಿ ಅನುಸರಿಸಿ, ಬೆಳೆಯ ಲಕ್ಷಣಗಳನ್ನು ಗುರ್ತಿಸಿ ನೀರನ್ನು ದುರ್ಬಳಕೆಯಾಗದಂತೆ ಹಿತಮಿತವಾಗಿಉಪಯೋಗಿಸಬೇಕು. ಭಾರತದಲ್ಲಿಸಮಗ್ರ ಕೃಷಿ ಪದ್ಧತಿ' ಅನುಸರಿಸಿ ರೈತರುಕಡಿಮೆ ಖರ್ಚಿನಲ್ಲಿಆದಾಯ ದ್ವಿಗುಣವಾಗುವಂತೆಯೋಜನಾಬದ್ಧ ಕೃಷಿ ಪದ್ಧತಿಅನುಸರಿಸಬೇಕು.ನೈಸರ್ಗಿಕ ಸಂಪನ್ಮೂಲ ಸದ್ಬಳಕೆಯೊಂದಿಗೆ ಪರಿಸರಕ್ಕೆ ಪೂರಕವಾದ ಸುಸ್ಥಿರ ಕೃಷಿ ಪದ್ಧತಿ–ಅಗತ್ಯಎಂದು ಹೇಳಿದರು.

ದತ್ತಿದಾನಿ ಈಶ್ವರಚಂದ್ರ ಹೊಸಮನಿ ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಸಾಹಿತ್ಯದಜೊತೆಗೆ ಕೃಷಿ ಬಗ್ಗೆ ಚಿಂತನ–ಮಂಥನಗಳು ನಡೆಯಲೆಂದುದತ್ತಿಇರಿಸಲಾಗಿದೆ–ಎಂದುಆಶಯ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಕ.ವಿ.ವ. ಸಂಘದಅಧ್ಯಕ್ಷರಾದಚಂದ್ರಕಾಂತ ಬೆಲ್ಲದ ಮಾತನಾಡಿ, ಭಾರತ ಕೃಷಿ ಪ್ರಧಾನದೇಶ. ಕೃಷಿ ಭಾರತದ ಬೆನ್ನೆಲುಬು. ಧಾರವಾಡದ ಕೃಷಿ ವಿಶ್ವವಿದ್ಯಾಲಯದೇಶದ ಮಾದರಿ ಕೃಷಿ ವಿಶ್ವವಿದ್ಯಾಲಯವಾಗಿದೆ.ಕೃಷಿ ಮೇಳದ ಮೂಲಕ ರೈತರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿದೆಎಂದರು.

ವೀರಣ್ಣಒಡ್ಡೀನ ಸ್ವಾಗತಿಸಿದರು.ಡಾ. ಮಹೇಶ ಹೊರಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಡಾ. ಶ್ರೀಶೈಲ ಹುದ್ದಾರ ನಿರೂಪಿಸಿದರು.ಶಂಕರ ಕುಂಬಿ ವಂದಿಸಿದರು.

ಶಿವಾನಂದ ಭಾವಿಕಟ್ಟಿ, ಬಿ.ಡಿ. ಪಾಟೀಲ, ಎಂ.ಡಿ.ಪಾಟೀಲ, ಡಾ.ಯರಗಟ್ಟಿ, ಸಿದ್ಧಣ್ಣ ಕಂಬಾರ, ಚಂದ್ರಗೌಡ ಭೂಮನಗೌಡ್ರ, ವೀರಭದ್ರಗೌಡ ಪಾಟೀಲ, ಪ್ರಕಾಶಜ–ಕಾತಿ.ರಾಜೇಂದ್ರ ಸಾವಳಗಿ, ಎಸ್. ಕೆ. ಕುಂದರಗಿ, ಪ್ರಕಾಶಧರಣೆಪ್ಪಗೌಡರ, ಎನ್.ಜಿ. ರಸಾಳಕರ ಸೇರಿದಂತೆ ಹೊಸಮನಿ ಪರಿವಾರದವರು ಇದ್ದರು.

# ದೈಹಿಕ ಆರೋಗ್ಯದ ಅರಿವು ಅಗತ್ಯ: ಡಾ. ವಿ.ಎಸ್. ಬಗಲಿ



**ವಿಜಯಪುರ,:** ಮುಂದಿನ ಪೀಳಿಗೆಗೆ ದೈಹಿಕ ಆರೋಗ್ಯದ ಕುರಿತು ಅರಿವು ಮೂಡಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಆಡಳಿತಾಧಿಕಾರಿ ಡಾ. ವಿ. ಎಸ್. ಬಗಲಿ ಹೇಳಿದ್ದಾರೆ.

ಬುಧವಾರ ಬಿ. ಎಲ್. ಡಿ. ಇ ಸಂಸ್ಥೆಯ ಜೆ.ಎಸ್.ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ವಿಜಯಪುರ ನಗರ ವಲಯ ಬಿ.ಎಡ್ ಕಾಲೇಜುಗಳ ಅಂತರ್ ಕಾಲೇಜು ವ್ಹಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಬಿ.ಎಡ್ ವಿದ್ಯಾರ್ಥಿಗಳು ಶಿಕ್ಷಕ ವೃತ್ತಿಯ ಕಡೆಗೆ ಗಮನ ಹರಿಸುವುದರ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ದೈಹಿಕವಾಗಿ ಸದೃಢರಾಗಲು ಇಂಥ ಪಂದ್ಯಾವಳಿಗಳಲ್ಲಿ ಭಾಗವಹಿಸಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಇದು ಕಡಿಮೆಯಾಗುತ್ತಿದೆ ಎಂದು ಹೇಳಿದರು.

ಬಿ. ಎಲ್. ಡಿ. ಇ ಸಂಸ್ಥೆಯ ನಿರ್ದೇಶಕ ಮತ್ತು ದೈಹಿಕ ಶಿಕ್ಷಣ ಆಡಳಿತಾಧಿಕಾರಿ ಡಾ. ಎಸ್. ಎಸ್. ಕೋರಿ ಮಾತನಾಡಿ, ಇಂದಿನ ಯಾಂತ್ರಿಕ ಯುಗದಲ್ಲಿ ಜನರು ದೈಹಿಕ ಚಟುವಟಿಕೆಗಳ ಅಭಾವವನ್ನು ಎದುರಿಸುತ್ತಿದ್ದಾರೆ. ಕ್ರೀಡೆಗಳಲ್ಲಿ ಸೋಲು ಗೆಲುವಿಗಿಂತ ಭಾಗವಹಿಸುವಿಕೆ ಮುಖ್ಯವಾಗಿದೆ.

ಕ್ರೀಡೆಗಳಲ್ಲಿ ಭಾಗವಹಿಸುವುದ–ರಿಂದ ಕ್ರೀಡಾ ಮನೋಭಾವ ಮತ್ತು ಉತ್ತಮ ವ್ಯಕ್ತಿತ್ವ ಬೆಳೆಯುತ್ತದೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಜೆ.ಎಸ್. ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಬಿ. ವೈ. ಖಾಸನೀಸ, ಬಿ.ಎಲ್.ಡಿ.ಇ ಸಂಸ್ಥೆಯ ಆಡಳಿತಾಧಿಕಾರಿ ಐ. ಎಸ್. ಕಾಳಪ್ಪನವರ, ಐ.ಕ್ಯೂ.ಎ.ಸಿ ಸಂಯೋಜಕ ಡಾ. ಎಂ. ಎಸ್. ಹಿರೇಮಠ, ಸಹ ಪ್ರಾಧ್ಯಾಪಕ ಡಾ. ಎಂ. ಬಿ. ಕೋರಿ ಮಾತನಾಡಿದರು.

ಈ ಸಂದರ್ಭದಲ್ಲಿ ಡಾ. ಎಸ್. ಪಿ. ಶೇಗುಣಿಸಿ, ಎಸ್. ಎಸ್. ಪಾಟೀಲ, ವಿಜಯಪುರ ನಗರದ ಎಂಟು ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಚಾರ್ಯರು, ದೈಹಿಕ ನಿರ್ದೇಶಕರು, ಕ್ರೀಡಾಪಟುಗಳು, ಕಾಲೇಜಿನ ಬೋಧಕ ಹಾಗೂ ಬೋಧಕರ ಹೊರತಾದ ಸಿಬ್ಬಂದಿ ಉಪಸ್ಥಿತರಿದ್ದರು.

# ಕನ್ನಡ ನಾಡ,ನುಡಿ ಜಾಗೃತಿಗೊಳಿಸೋಣ: ಅಬೀದ್ ಗದ್ಯಾಳ



**ಇಂಡಿ :** ಕನ್ನಡ ನಾಡು, ನುಡಿ, ಭಾಷೆ, ಮತ್ತು ಸಾಂಸ್ಕೃತಿಕ ಪರಂಪರೆ ಜಾಗೃತಗೊಳಿಸುವ ಕೆಲಸ ಮಾಡಬೇಕು ಎಂದು ಕಂದಾಯ ಉಪ ವಿಭಾಗಾಧಿಕಾರಿ ಅಬೀದ್ ಗದ್ಯಾಳ ಹೇಳಿದರು.

ಇಂಡಿ ನಗರದ ಹಂಜಗಿ ಕ್ರಾಸ್ ಹತ್ತಿರ ಬುಧವಾರ ಹೊರ್ತಿಯಿಂದ ಆಗಮಿಸಿದ ಕನ್ನಡ ರಥವನ್ನು ಸ್ವಾಗತಿಸಿ ಮಾತನಾಡಿದರು.

ವಿಜಯಪುರ ಜಿಲ್ಲಾ ಕಸಾಪ ಅಧ್ಯ ಹಾಸಿಂಪೀರ ವಾಲಿಕಾರ ಮಾತನಾಡಿ, ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನ ನಡೆಯಲಿದ್ದು, ಇದರ ಪ್ರಚಾರಾರ್ಥ ಮತ್ತು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ 50 ವರ್ಷ ಆಗುತ್ತಿದೆ. ಈ ಹಿನ್ನಲೆ ಪ್ರಚಾರ ರಥ ಸಂಚರಿಸುತ್ತಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಎಸ್. ಅಲಗೂರ,ಕಸಾಪ ಇಂಡಿ ಘಟಕದ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ ರಾಘವೇಂದ್ರ ಕುಮಾರ ಮಾತನಾಡಿದರು.

ಡಾ. ರಾಜಕುಮಾರ ಅಡಕಿ, ಪುರಸಭೆ ಮುಖ್ಯಾಧಿಕಾರಿ ಮಹಾಂತೇಶ ಹಂಗರಗಿ, ರಮೇಶ ನರಳೆ, ಜಾವೇದ ಬಾಗವಾನ, ಪುರಸಭೆ ಅಧ್ಯಕ್ಷ ಲಿಂಬಾಜಿ ರಾಠೋಡ್, ಸಂಗಣ್ಣ ಭೈರಾಜಿ, ಕಜಾಪ ಅಧ್ಯಕ್ಷ ಆರ್.ವಿ. ಪಾಟೀಲ, ಸಂಜಯ ಚಟ್ಟರಕಿ, ಸತ್ಯಣ್ಣ ಹಡಪದ, ಕೆ.ಜಿ. ನಾಟೀಕಾರ, ಎಸ್.ಡಿ. ಕಲ್ಯಾಣಿ, ಎಸ್.ಆರ್. ಗದ್ಯಾಳ, ಪಿ.ಎಂ. ಮಠಪತಿ, ಸಿದರಾಯ ಆಲೂರ, ಜಾವೇದ ಮೋಮಿನ, ಜಟ್ಟೆಪ್ಪ ರವಳಿ, ಪ್ರಶಾಂತ ಕಾಳೆ, ಬಸವರಾಜ ಗೋರನಾಳ, ಬಿ.ವೈ. ದಳವಾಯಿ, ಪ್ರದೀಪ ಪವಾರ, ಕರವೇ ಸ್ವಾಭಿಮಾನಿ ಬಣದ ಶಿವಾನಂದ ಬಡಿಗೇರ, ಧನಪಾಲಶೆಟ್ಟಿದೇವೂರ ಪಾರ್ವತಿ ಸೊನ್ನದ, ಸಿ.ಎಂ. ಕಾಳೆ, ಲಲಿತಾ ಮಾದರ, ಶಾರದ ಗಿರಣಿವಡ್ಡರ, ಜಯಶ್ರೀ ತೆಲಗಾ, ಸಾವಿತ್ರಿ ಮನ್ನಾಡ, ಸುಚಲೋದ ಮಾದರ ಇದ್ದರು

# ಕರವೇ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಅಣ್ಣಾಸಾಹೇಬ ತೆಲಸಂಗ ನೇಮಕ




**ಅಥಣಿ** ಕನ್ನಡ ನಾಡು ನುಡಿ, ನೆಲ–ಜಲ, ಕಲೆ, ಸಂಸ್ಕೃತಿ. ಭಾಷೆಗೆ ಧಕ್ಕೆ ಬಂದಾಗ ನಿರಂತರವಾಗಿ ಹೋರಾಟ ಮಾಡುತ್ತ ಬಂದಿರುವ ಕನ್ನಡಪರ ಹೋರಾಟಗಾರ ಅಣ್ಣಾಸಾಹೇಬ ತೆಲಸಂಗ ಬೆಳಗಾವಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

ಶುಕ್ರವಾರ ಬೆಳಗಾವಿಯಲ್ಲಿ ನಡೆದ ಕರವೇ ಜಿಲ್ಲಾ ಮಟ್ಟದ ಸಭೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಎಚ್ ಶಿವರಾಮೇಗೌಡರ, ಉತ್ತರ ಕರ್ನಾಟಕ ವಲಯ ಅಧ್ಯಕ್ಷ ಮಹಾಂತೇಶ ರಣಗಟ್ಟಿಮಠ ಅವರ ಮಾರ್ಗದರ್ಶನದಲ್ಲಿ ಬೆಳಗಾವಿ ಜಿಲ್ಲಾಧ್ಯಕ್ಷ ವಾಜೀದ್ ಹಿರೇಕುಡಿ ಅವರು ಜಿಲ್ಲಾ ಘಟಕದ ನೂತನ ಪದಾಧಿಕಾ–ರಿಗಳಿಗೆ ಆದೇಶ ಪತ್ರ ನೀಡಿದರು.

ಅಥಣಿ ತಾಲೂಕಿನಲ್ಲಿ ಕಳೆದ ಹದಿನೈದು ವರ್ಷಗಳಿಂದ ಕನ್ನಡಪರ ಹೋರಾಟ ಮತ್ತು ಕನ್ನಡ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಬರುತ್ತಿರುವ ಅಣ್ಣಾಸಾಹೇಬ ತೆಲಸಂಗ ಅವರಿಗೆ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡುವ ಮೂಲಕ ಜಿಲ್ಲೆಯಲ್ಲಿ ಕನ್ನಡದ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸುವ ಜವಾಬ್ದಾರಿ ನೀಡಿದರು

# ಪೊಲೀಸರ ಮೇಲೆ ಯುವಕರಿಂದ ಹಲ್ಲೆ



**ಗಂಗಾವತಿ (ಕೊಪ್ಪಳ ಜಿಲ್ಲೆ):** ತಾಲ್ಲೂಕಿನ ದಾಸನಾಳ ಗ್ರಾಮದ ಮುಖ್ಯ ರಸ್ತೆಯಲ್ಲಿ ಬುಧವಾರ ಬೈಕ್ ವೀಲಿಂಗ್ ಮಾಡುತ್ತಿರುವ ಯುವಕರನ್ನು ತಡೆಯಲು ಮುಂದಾದ ಪೊಲೀಸರ ಮೇಲೆಯೇ ಯುವಕರು ಹಲ್ಲೆ ನಡೆಸಿದ್ದಾರೆ. ಹಲ್ಲೆ ಮಾಡಿದ ಯುವಕರಾದ ಗಂಗಾವತಿ ನಗರದ ಅರ್ಬಜ್ ಖಾನ್, ಪಂಪನಗೌಡ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ದಾಸನಾಳದ ಮುಖ್ಯ ರಸ್ತೆಯಲ್ಲಿ ಯುವಕನೊಬ್ಬ ಬೈಕ್ ವೀಲಿಂಗ್ ನಡೆಸುತ್ತಿರುವಾಗ, ಕೊಪ್ಪಳದಿಂದ ಗಂಗಾವತಿಗೆ ಬರುತ್ತಿದ್ದ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ ಅಧಿಕಾರಿಗಳು ವಾಹನ ನಿಲ್ಲಿಸಿ, ಬೈಕ್ ವೀಲಿಂಗ್ ತಡೆಯಲು ಮುಂದಾಗಿದ್ದರು.

ಈ ವೇಳೆ ಪೊಲೀಸ್ ಅಧಿಕಾರಿಗಳು ಮತ್ತು ಬೈಕ್ ವೀಲಿಂಗ್ ಯುವಕರ ನಡುವೆ ಮಾತಿನ ಚಕಮಕಿ ನಡೆದು, ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಗಿದೆ. ಯುವಕರು ಏಕಾಏಕಿ ಪೊಲೀಸ್ ಕಾನ್‌ಸ್ಟೆಬಲ್ ಬಸವರಾಜ ಮತ್ತು ಗ್ರಾಮೀಣ ಠಾಣೆ ಪಿಎಸ್‌ಐ ಪುಂಡಲಿಕಪ್ಪ, ಮತ್ತೊಬ್ಬ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಿದ್ದಾರೆ

# ಭಾರತೀಯ ಅಂಚೆ ಸೇವೆ ದೇಶದ ಅವಿಭಾಜ್ಯ ಅಂಗ:ಸಂತೋಷ ಬಂಡೆ



**ವಿಜಯಪುರ, :** ಭಾರತೀಯ ಅಂಚೆ ಸೇವೆ ದೇಶದ ಅವಿಭಾಜ್ಯ ಅಂಗವಾಗಿದ್ದು, ಇದು ವಿಶ್ವದಲ್ಲೇ ಅತಿ ದೊಡ್ಡದಾದ ಸಂಪರ್ಕ ಜಾಲವನ್ನು ಹೊಂದಿದೆ. ತಂತ್ರಜ್ಞಾನ ಬೆಳೆದಂತೆ ಇಂದಿನ ಜನರು ಅಂಚೆ ಸೇವೆಗಳ ಬಳಕೆಯನ್ನು ಕಡಿಮೆ ಮಾಡಿದ್ದು ಕಳವಳಕಾರಿಯಾಗಿದೆ ಎಂದು ಶಿಕ್ಷಕ ಸಾಹಿತಿ ಸಂತೋಷ ಬಂಡೆ ಹೇಳಿದರು.

ಗುರುವಾರದಂದು ನಾಗಠಾಣ ಗ್ರಾಮದ ಅಂಚೆ ಕಚೇರಿಯಲ್ಲಿ ಹಮ್ಮಿಕೊಂಡ 'ರಾಷ್ಟ್ರೀಯ ಅಂಚೆ ದಿನ' ವನ್ನು ಉದ್ಧೇಶಿಸಿ ಮಾತನಾಡಿದರು.

ಪ್ರಪಂಚದಾದ್ಯಂತ ಜನರ ದೈನಂದಿನ ಜೀವನದಲ್ಲಿನ ವ್ಯವಹಾರ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಯಲ್ಲಿ ಅಂಚೆ ಇಲಾಖೆಯ ಪಾತ್ರದ ಬಗ್ಗೆ ಜನರಿಗೆ ಅರಿವು ಮೂಡಿಸಿ, ಗ್ರಾಮೀಣ ಅಂಚೆ ಜೀವ ವಿಮೆಯಂತಹ ಮಾಹಿತಿ ಎಲ್ಲ-ರಿಗೂ ವ್ಯಾಪಕವಾಗಿ ತಿಳಿಸುವ ಅಗತ್ಯವಿದೆ ಎಂದು ಹೇಳಿದರು.

ಸಾರ್ವಜನಿಕ ಯೋಜನೆಗಳನ್ನು ಸುಲಭಗೊಳಿಸುವಲ್ಲಿ ಅಂಚೆ ಸೇವೆಗಳ ಪಾತ್ರ ಅನನ್ಯ.ಪ್ರಪಂಚದ ನಾನಾ ಭಾಗಗಳ ಜನತೆ, ಸಂಸ್ಥೆಗಳ ನಡುವಿನ ಸಂಪರ್ಕಕ್ಕೆ ಅತ್ಯಂತ ಹಳೆಯ ಸಾಧನವಾಗಿ ಅಂಚೆ ಸೇವೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಹೇಳಿದರು.

ಶಾಖಾ ಅಂಚೆ ಅಧಿಕಾರಿ ಹಣಮಂತ ಅರಕೇರಿ ಮಾತನಾಡಿ, ಅಂಚೆ ಇಲಾಖೆ ಉತ್ತಮ ಗ್ರಾಹಕ ಸ್ನೆ?ಹಿಯಾಗಿದ್ದು, ಇದು ಸುಕನ್ಯಾ ಸಮೃದ್ಧಿ ಯೋಜನೆ ಮತ್ತು ಪಿಂಚಣಿ ಸೌಲಭ್ಯಗಳ ಅಡಿಯಲ್ಲಿ ವೇತನ ವಿತರಣೆಯಂತಹ ಸೇವೆಯ ಜತೆಗೆ ಸಂಧ್ಯಾ ಸುರಕ್ಷಾ ಯೋಜನೆ, ವಿಧವಾ ವೇತನ, ವಿಶೇಷಚೇತನ ಗ್ರಾಹಕರಿಗೆ ಮತ್ತಷ್ಟು ಸವಲತ್ತುಗಳನ್ನು ಒದಗಿಸುವ ಮೂಲಕ ದೇಶದ ವ್ಯವಸ್ಥೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ ಎಂದು ಹೇಳಿದರು.

ಸಹಾಯಕ ಅಂಚೆ ಅಧಿಕಾರಿ ಪ್ರಸಾದ ನಾಯ್ಕೋಡಿ, ಯುವ ಮುಖಂಡ ರಾಜು ಕತ್ನಳ್ಳಿ, ಪಿಕೆಪಿಎಸ್ ನಿರ್ದೇಶಕ ಪ್ರಭಾಕರ ಅರಕೇರಿ, ಗ್ರಾಮಸ್ಥರಾದ ಚನ್ನಯ್ಯ ನಂದಿಕೋಲ, ಶ್ರೀಕಾಂತ ಗುಜ್ಜಲಕರ, ಕಾಶೀನಾಥ ಬಡಿಗೇರ, ಶರಣಪ್ಪ ಬಂಥನಾಳ, ಸಂತೋಷ ಸಂಗೋಗಿ, ಮಲ್ಲಿಕಾರ್ಜುನ ಸಮಗೊಂಡ, ಶರಣಪ್ಪ ಕತ್ನಳ್ಳಿ, ಕಲ್ಲಪ್ಪ ವಾಲೀಕಾರ, ಶಂಕ್ರೆಪ್ಪ ಅರಕೇರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಶಾಖಾ ಅಂಚೆ ಅಧಿಕಾರಿ ಹಣಮಂತ ಅರಕೇರಿ ಅವರನ್ನು ಸನ್ಮಾನಿಸಲಾಯಿತು.

# ಹೆತ್ತ ತಂದೆತಾಯಿ ಹಾಗೂ ವಿದ್ಯೆ ಕಲಿಸಿದ ಗುರುಗಳ ಋಣ ತೀರಿಸಲು ಸಾಧ್ಯವಿಲ್ಲ : ಮಲಗೌಡ ಝುರೆ



**ಅಥಣಿ :** ಸಮಾಜದಲ್ಲಿ ಗುರುವಿನ ಸ್ಥಾನ ದೊಡ್ಡದು. ಅವರು ಕೊಟ್ಟ ಶಿಕ್ಷಣದಿಂದಲೇ ವಿದ್ಯಾರ್ಥಿಗಳು ಸಮಾಜದಲ್ಲಿ ಸುಂದರ ಬದುಕಟ್ಟಿಕೊಳ್ಳಲು ಸಹಕಾರಿಯಾಗಿದೆ. ದೇಶಕ್ಕೆ ಉತ್ತಮ ಪ್ರಜೆಗಳನ್ನು ರೂಪಿಸುವ ಶಕ್ತಿ ಗುರುವಿನಲ್ಲಿದೆ ಎಂದು ಕೆ.ಎ.ಎಸ್ ಅಧಿಕಾರಿ ಮಲಗೌಡ ಝುರೆ ಹೇಳಿದರು.

ಅವರು ತಾಲೂಕಿನ ಐಗಳಿ ಗ್ರಾಮದ ಅಪ್ಪಯ್ಯ ಸ್ವಾಮಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಎಸ್.ಎಮ್.ಜನಗೌಡ ಇವರಿಗೆ ಅಥಣಿ ರೋಟರಿ ಕ್ಲಬ್ ವತಿಯಿಂದ ನೀಡಲಾಗುವ ರಾಷ್ಟ್ರ ನಿರ್ಮಾತೃ ಪ್ರಶಸ್ತಿ ಲಭಿಸಿದ ಕಾರಣ ಆತ್ಮೀಯ ಗುರುಗಳಿಗೆ ಸನ್ಮಾನಿಸಿ. ಗೌರವಿಸಿ ಮಾತನಾಡಿದರು.ಜನತಾ ಕಾಲನಿಯಲ್ಲಿರುವ ನನಗೆ ವಿದ್ಯೆ ಕಲಿಸಿ ಉನ್ನತ ಹುದ್ದೆಗೆ ಹೋಗಲು ಪ್ರೇರಣೆ ನೀಡಿದವರು ಇಂತಹ ಗುರುಗಳನ್ನು ಎಂದಿಗೂ ಮರೆಯಲಾಗದು. ಹೆತ್ತ ತಂದೆ, ತಾಯಿ, ವಿದ್ಯೆ ನೀಡಿದ ಗುರುವಿನ ಋಣಕ್ಕೆ ಬೆಲೆ ಕಟ್ಟಲಿಕ್ಕಾಗದು ಮಾತ್ರವಲ್ಲ ಅದರ ಋಣ ತೀರಿಸಲಿಕ್ಕಾಗದು ಇವರಿಗೆ ಸನ್ಮಾನಿಸಿ ಗೌರವಿಸುವುದರಿಂದ ಮನಸ್ಸಿಗೆ ತೃಪ್ತಿ ಸಿಗಲಿದೆ. ನನ್ನಂತಹ ಅನೇಕ-ರಿಗೆ ವಿಧ್ಯಾರ್ಥಿಗಳಿಗೆ ಶಿಕ್ಷಣ ನೀಡಿದ್ದಾರೆ. ಅವರೆಲ್ಲರೂ ಕೂಡಾ ಉನ್ನತ ಹುದ್ದೆಗಳಲ್ಲಿ ಕಾರ್ಯ ಮಾಡುತ್ತಿದ್ದಾರೆ. ಇನ್ನೂ ಸಾವಿರಾರು ವಿದ್ಯಾರ್ಥಿಗಳಿಗೆ ಒಳ್ಳೆಯ ಜ್ಞಾನ ಕೊಟ್ಟು ಸುಂದರ ದೇಶ ಕಟ್ಟುವ ಪ್ರಜೆಗಳನ್ನ ನಿರ್ಮಾಣ ಮಾಡುವ ಶಕ್ತಿ ಪರಮಾತ್ಮ ದಯಪಾಲಿಸಲಿ ಎಂದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಕನ್ನಾಳದ ಪೂಜ್ಯ ಬಸವಲಿಂಗ ಮಹಾ ಸ್ವಾಮಿಗಳು ಮಾತನಾಡಿ ಮುಖ್ಯ ಶಿಕ್ಷಕ ಎಸ್.ಎಮ್.ಜನಗೌಡ ಒಳ್ಳೆಯ ಆದ್ಯಾತ್ಮಿಕ ಜೀವಿಗಳು ಆದರ್ಶ ಶಿಕ್ಷಕರು ಹೌದು ಸಾಹಿತಿಗಳು ಮತ್ತು ಸ್ನೇಹಜೀವಿಯಾಗಿ ಜೀವನ ಸಾಗಿಸಿದರು ಇವರು ಪ್ರಶಸ್ತಿಗಾಗಿ ದುಡಿಯುವವರಲ್ಲಿ ಪ್ರಶಸ್ತಿ ತಾನಾಗಿಯೇ ಇವರನ್ನು ಹುಡುಕಿಕೊಂಡು ಬರಬೇಕು ಎನ್ನುವಂತೆ ಇದ್ದಾರೆ. ಈ ಭಾಗದಲ್ಲಿ ಎಲ್ಲರ ಮನದಾಳದಲ್ಲಿ ಉಳಿದಿದ್ದಾರೆ ಎಲ್ಲದಕ್ಕಿಂತಲೂ ಮೊದಲೇ ಶಾಲೆಗೆ ಬರುವದು ಶಾಲೆ ಬಿಟ್ಟ ನಂತರ ಎಲ್ಲರಕ್ಕಿಂತ ನಂತರ ಹೋಗುವ ಸ್ವಭಾವವನ್ನು ಬೆಳೆಸಿಕೊಂಡಿದ್ದಾರೆ. ಅಷ್ಟೇ ಅಲ್ಲದೇ ಸಂಬಳಕ್ಕಿಂತ ಹೆಚ್ಚು ಕೆಲಸ ಮಾಡುವ ಶಿಕ್ಷಕರಾಗಿದ್ದಾರೆ. ಸರಕಾರ ಮುಂದಿನ ದಿನಮಾನಗಳಲ್ಲಿ ಇವರಿಗೆ ರಾಜ್ಯ ಪ್ರಶಸ್ತಿ ನೀಡಲಿ ಎಂದ ಆಶಯ ವ್ಯಕ್ತಪಡಿಸಿದರು

ಈ ವೇಳೆ ರಾಜ್ಯ ಪ್ರಶಸ್ತಿ ಪುರಸ್ಕೃತ ಮಲಗೌಡ ಪಾಟೀಲ, ಹಿರಿಯ ಕಲಾವಿದ ಕೆ.ಎಸ್.ಬಿರಾದಾರ, ಗ್ರಾ.ಪಂ ಸದಸ್ಯ ಶ್ರೀಶೈಲ ಮಿರ್ಜಿ ಮಾತನಾಡಿದರು.

ಕೋಹಳ್ಳಿಯ ಗಂಗಾಧರ ಹಿರೇಮಠ, ಸಾನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ಅಪ್ಪಾಸಾಬ ಮುಧೋಳ, ಶಂಕರ ಹಿಪ್ಪರಗಿ, ಗ್ರಾ.ಪಂ ಸದಸ್ಯ ಸೋಮಲಿಂಗ ಝುರೆ, ಸೈಬಣ್ಣಾ ಪೂಜಾರಿ, ಮಲ್ಲಿಕಾರ್ಜುನ ಹಿಪ್ಪರಗಿ, ಶಿಕ್ಷಕ ಬಿ.ಎನ್. ಚಪ್ಪರಬಂದ, ಆರ್.ಟಿ.ಬಾಗಿ, ಸೇರಿದಂತೆ ಅನೇಕರು ಇದ್ದರು.

# ಆಕ್ಷನ್ ಏಡ್ ಅಸೋಸಿಯೇಶನ್ ಸಂಸ್ಥೆಯಿಂದ ಆಹಾರ ಕಿಟ್ ವಿತರಣೆ




**ಅಥಣಿ :** ಅಥಣಿ ತಾಲೂಕಿನ ಹುಲಗಬಾಳ, ಜನವಾಡ, ಹಾಗೂ ಸಪ್ತಸಾಗರ ಗ್ರಾಮದ ಪರಿಶಿಷ್ಟ ಜಾತಿ. ಪರಿಶಿಷ್ಟ ಪಂಗಡ ಹಾಗೂ ಶೋಷತ ಸಮುದಾಯದ ಕುಟುಂಬಗಳಿಗೆ ಆಕ್ಷನ್ ಏಡ್ ಅಸೋಸಿಯೇಶನ್ ಸಂಸ್ಥೆ ಬೆಂಗಳೂರು ಇವರ ವತಿಯಿಂದ ಸುಮಾರು 200 ಕುಟುಂಬಗಳಿಗೆ ಆಹಾರ ಧಾನ್ಯಗಳ ಕಿಟ್ ವಿತರಣೆ ಮಾಡಲಾಯಿತು,

ಈ ವೇಳೆ ಸಂಸ್ಥೆಯ ಜಿಲ್ಲಾ ಸಂಯೋಜಕ ನಾಮದೇವ ಹಿರೇಕೋಡಿ ಮಾತನಾಡಿ ಪ್ರವಾಹ ಪೀಡಿತ ಹಾಗೂ ಕರೋನಾ ಸಂಕಷ್ಟದಲ್ಲಿದ್ದ ಕುಟುಂಬಗಳಿಗೆ ಆಕ್ಷನ್ ಏಡ್ ಅಸೋಸಿಯೇಷನ್ ಸಂಸ್ಥೆ ಬೆಂಗಳೂರು ಈ ಸಂಸ್ಥೆಯು ಹಲವಾರು ಸಹಾಯ ಸೌಲಭ್ಯಗಳನ್ನು ಒದಗಿಸಿದ್ದು ಉದ್ದಿನಕಡ್ಡಿ ತರಬೇತಿ. ಆಡು ಸಾಕಾಣಿಕೆ, ಪ್ರವಾಹದಲ್ಲಿ ಬಿದ್ದ ಮನೆಗಳಿಗೆ ಮನೆ ಕಟ್ಟಿಕೊಳ್ಳಲು ಸಹಾಯ ಹುಲಗಬಾಳ ನದಿ ಇಂಗಳಗಾಂವ ತೀರ್ಥ, ಖವಟಕೋಪ್ಪ, ದರೂರ, ಹಲವು ಗ್ರಾಮದ ಪ್ರವಾಹ ಪೀಡಿತ ಕುಟುಂಬದವರಿಗೆ ಸಹಾಯ ಮಾಡುತ್ತಾ ಬಂದಿದೆ 2019 ರಿಂದ ಇಲ್ಲಿಯವರೆಗೆ ಈ ಸಂಸ್ಥೆ ಕಷ್ಟದಲ್ಲಿದ್ದ ಜನರ ಜೊತೆ ಭಾಗಿಯಾಗಿ ಇಲ್ಲಿಯವರೆಗೆ ಸುಮಾರು ಎರಡು ಕೋಟಿ ರೂಪಾಯಿಗಳ ಜೀವನ ಅವಶ್ಯಕ ಹಾಗೂ ಆಹಾರ ಕಿಟ್ ವಿತರಣೆ ಮಾಡಲಾಗಿದೆ ಎಂದರು,

ಈ ಸಂದರ್ಭದಲ್ಲಿ ನ್ಯಾಯವಾದಿ ರಾಮು ಪುಜಾರಿ, ಗ್ರಾಮ ಪಂಚಾಯತಿ ಸದಸ್ಯ ನಾಗರಾಜ ಕಾಂಬಳೆ, ಲಗಮಣ್ಣ ಕಾತ್ರಾಳೆ, ಸಾಗರ ಕಾಂಬಳೆ, ಅಪ್ಪಾಸಾಬ ನಾಗನಾಥ, ದೀಲಿಪ ಕಾಂಬಳೆ, ಗಣಪತಿ ಕಾಂಬಳೆ, ರಾಜು ಕಾಂಬಳೆ, ಅಪ್ಪಸಾಬ ಕಾಂಬಳೆ, ಮಹೇಂದ್ರ ಸುಲಾರೆ, ರಾಮು ಗಸ್ತಿ, ಯಲ್ಲಪ್ಪ ಕಾಂಬಳೆ, ಭೀಮಶಿ ಸುಲಾರೆ, ರಮೇಶ ಕಾಂಬಳೆ, ಶಶಿಕಾಂತ ಕಾಂಬಳೆ, ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದರು.

# ಕೆಜಿಎಫ್ 150 ಗರ್ಭಿಣಿಯರಿಗೆ ಸಾಮೂಹಿಕ ಸೀಮಂತ



**ಕೆಜಿಎಫ್:** ಏಳು ಮತ್ತು ಒಂಬತ್ತು ತಿಂಗಳು ತುಂಬಿದ ನೂರೈವತ್ತು ಗರ್ಭಿಣಿಯರಿಗೆ ರಾಬರ್ಟಸನ್‌ಪೇಟೆಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ವೈಭವದ ಸೀಮಂತ ನಡೆಯಿತು.

ಶಾಸಕಿ ಎಂ.ರೂಪಕಲಾ ಭಾಗವಹಿಸಿದ್ದ ಗರ್ಭಿಣಿಯರಿಗೆ ಸೀರೆ, ಸಾಂಪ್ರದಾಯಿಕ ವಸ್ತು, ಐದು ಬಗೆಯ ಹಣ್ಣುಗಳು, ಸೀರೆ ಮತ್ತು ಉಡುಗೊರೆ ನೀಡಿ ಗೌರವಿಸಿದರು. ಶಾಸ್ತ್ರೋಕ್ತವಾಗಿ ಅವರಿಗೆ ಅರಿಸಿನ, ಕುಂಕುಮ, ಬಳೆ ಇಟ್ಟು, ಹೂಮಾಲೆ ಹಾಕಿ ಗೌರವಿಸಲಾಯಿತು. ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯದ ಗರ್ಭಿಣಿಯರು ಜಾತಿ, ಧರ್ಮ ತಾರತಮ್ಯವಿಲ್ಲದೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಗರ ಮತ್ತು ಗ್ರಾಮಾಂತರ ಪ್ರದೇಶದ ಗರ್ಭಿಣಿಯರನ್ನು ಸಭೆಗೆ ಕರೆತರುವಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಿಬ್ಬಂದಿ ಸಾಕಷ್ಟು ಮುತುವರ್ಜಿ ವಹಿಸಿದ್ದರು. ಸಾಮಾನ್ಯವಾಗಿ ಗರ್ಭಿಣಿಯರು ಮೊದಲ ಮಗು ಪಡೆಯುವ ಸಂದರ್ಭದಲ್ಲಿ ಅತ್ಯಂತ ಸಂತೋಷದಾಯಕವಾಗಿರುತ್ತಾರೆ. ಅದರ ಸಂಭ್ರಮವನ್ನು ಸೀಮಂತದ ರೂಪದಲ್ಲಿ ಮಾಡುವುದು ಸಂಪ್ರದಾಯವಾಗಿದೆ. ಹಲವು ಕುಟುಂಬದಲ್ಲಿ ಸೀಮಂತ ಮಾಡಲು ಆರ್ಥಿಕವಾಗಿ ಸಾಧ್ಯವಿರುವುದಿಲ್ಲ. ಗರ್ಭಿಣಿಯರ ಬಯಕೆ ಈಡೇರಿಸುವುದು ಕರ್ತವ್ಯವೆಂದು ಭಾವಿಸಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಶಾಸಕಿ ರೂಪಕಲಾ ತಿಳಿಸಿದರು.

# ನಂದಾದೀಪಾರಾಧನಾ ಮಹೋತ್ಸವ



**ಲಕ್ಷ್ಮೇಶ್ವರ :** ಪಟ್ಟಣದ ಲಿಂಬಯ್ಯ ಸ್ವಾಮಿ ಪ್ರತಿಭಾ ಪ್ರತಿಷ್ಠಾನದ ವತಿಯಿಂದ ದಿನಾಂಕ 11 ರಂದು ಸಾಯಂಕಾಲ 7 ಗಂಟೆಗೆ ಲಿಂಬಯ್ಯ ಸ್ವಾಮಿ ಮಠದ ಆವರಣದಲ್ಲಿ ಪ್ರತಿವರ್ಷದಂತೆ ಸಾಂಪ್ರದಾಯಕವಾಗಿ ನಡೆದು ಬಂದ ನಂದಾ ದೀಪಾ ರಾಧನಾ ಮಹೋತ್ಸವವೂ ಜರುಗಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಶಿವಪ್ರಕಾಶ್ ಲಿಂಬ ಯ್ಯಸ್ವಾಮಿಮಠ ಹೇಳಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಈ ವರ್ಷ ಮೂವರು ಸಾಮಾಜಿಕ ಕಾರ್ಯಕರ್ತರನ್ನು ಗುರುತಿಸಿ ಸನ್ಮಾನಿಸಲಾಗುವುದು ಎಂದು ಹೇಳಿದರು. ಹಾವೇರಿ ಜಿಲ್ಲೆಯ ಕೆಸರಳ್ಳಿ ಹಾಲಯ್ಯನವರು ಕುಲಕರ್ಣಿ ಇವರಿಗೆ ಕಾಯಕ ಜೀವಿ ಪಟ್ಟಣದ ಪ್ರತಿಮಾ ಮಹಾಜನ್ ಶೆಟ್ಟರ ಇವ-ರಿಗೆ ಸಾತ್ವಿಕ ಜೀವಿ ಫಕೀರಪ್ಪ ಕಳ್ಳಿಮನಿ ಇವರಿಗೆ ಸಮಾಜ ಜೀವಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದ ಸಾನಿಧ್ಯವನ್ನು ಧಾರವಾಡದ ಮುರುಘಾಮಠದ ಡಾ. ಮಲ್ಲಿಕಾರ್ಜುನ ಮಹಾಸ್ವಾಮಿಗಳು ವಹಿಸಲಿದ್ದು ಅಧ್ಯಕ್ಷತೆಯನ್ನು ಮಾಜಿ ಶಾಸಕ ಜಿಎಸ್ ಗಡ್ಡದೇವರ ಮಠ ಅವರು ವಹಿಸಲಿದ್ದು ಮುಖ್ಯ ಅತಿಥಿಯಾಗಿ ಅಗಡಿ ಇಂಜಿನಿಯರಿಂಗ್ ಕಾಲೇಜಿನ ಸೋಮಶೇಖರ ಕೆರಿಮನಿ ಆಗಮಿಸಲಿದ್ದಾರೆ .

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷೆ ಯಲ್ಲವ್ವ ದುರ್ಗಣ್ಣವರ ಉಪಾಧ್ಯಕ್ಷ ಫೀರ್ ದೋಷ ಆಡೋರ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ನಾಗರಾಜ್ ಶಿಗ್ಲಿ ಅವರನ್ನು ಸನ್ಮಾನಿಸಲಾಗುವುದು ಎಂದು ಶಿವಪ್ರಕಾಶ್ ಲಿಂಬಯ್ಯ ಸ್ವಾಮಿ ಮಠ ಹೇಳಿದರು.

ಪ ತ್ರಿ ಕಾ ಗೆ ೋ ಷ್ಠಿ ಂ ು ್ ಲ್ಲಿ ಧರ್ಮದರ್ಶಿಗಳಾದ ಬಸಣ್ಣ ಬೆಂಡಿಗೇರಿ ಶಾಂತಣ್ಣ ಓದುನವರ ನಿಂಗಪ್ಪ ಬನ್ನಿ ಚಿದಾನಂದ ಸ್ವಾಮಿ ಲಿಂಬಯ್ಯ ಸ್ವಾಮಿ ಮಠ ಬಸಣ್ಣ ಗಾಂಜಿ ಮರುಳಾರಾಧ್ಯ ಕಳ್ಳಿಮಠ ವಿಜಿ ಪಡಿಗೇರಿ ಸಾಹೀಬ್ಜಜಾನ ಹವಾಲ್ದಾರ ಇದ್ದರು.

ಧರ್ಮದರ್ಶಿ ಕೆಎಸ್ ಕುಲಕರ್ಣಿ ಮಹೇಶ್ ಲಿಂಬಯ್ಯ ಸ್ವಾಮಿ ಮಠ ನಿರ್ವಹಿಸಿದರು.

# ಬಾಗಲಕೋಟೆ ಟ್ರಸ್ಟ್, ಅಕಾಡೆಮಿ: ಖರ್ಚಾಗದ ಅನುದಾನ



**ಬಾಗಲಕೋಟೆ:** ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ಅನುದಾನದ ಕೊರತೆ ಕಾಡುತ್ತಿದೆ. ಆದರೆ, ಜಿಲ್ಲೆಯ ಪ್ರತಿಷ್ಠಾನ, ಟ್ರಸ್ಟ್ ಮತ್ತು ಸಮಿತಿಗಳಲ್ಲಿ ಲಕ್ಷ, ಕೋಟಿಗಟ್ಟಲೇ ಹಣ ನಾಲ್ಕಾರು ವರ್ಷಗಳಿಂದ ಬಳಕೆಯಾಗದೆ ಹಾಗೆಯೇ ಉಳಿದಿದೆ.

ಕವಿ ಚಕ್ರವರ್ತಿ ರನ್ನನ ಹೆಸರಿನಲ್ಲಿ ಪ್ರತಿಷ್ಠಾನ, ನಾಟಕಕಾರ ಪಿ.ಬಿ. ದುತ್ತರಗಿ ಅವರ ಹೆಸರಿನಲ್ಲಿ ಟ್ರಸ್ಟ್ ಮತ್ತು ಚಾಲುಕ್ಯ ಉತ್ಸವಕ್ಕಾಗಿ ಸಮಿತಿ ರಚಿಸಲಾಗಿದೆ. ಆದರೆ, ಯಾವುದೇ ಚಟುವಟಿಕೆಗಳು ನಡೆದಿಲ್ಲ.

ರನ್ನ ಪ್ರತಿಷ್ಠಾನ ಮತ್ತು ಪಿ.ಬಿ.ದುತ್ತರಗಿ ಟ್ರಸ್ಟ್‌ಗೆ ಪ್ರತಿ ವರ್ಷ ವಾರ್ಷಿಕ ?8 ಲಕ್ಷ ಅನುದಾನವಿದೆ. ಪ್ರತಿಷ್ಠಾನದ ಖಾತೆಯಲ್ಲಿ ?97 ಲಕ್ಷ, ಟ್ರಸ್ಟ್ ಖಾತೆಯಲ್ಲಿ ?65 ಲಕ್ಷ, ಚಾಲುಕ್ಯ ಉತ್ಸವ ಸಮಿತಿಯ ಖಾತೆಯಲ್ಲಿ ?2.42 ಕೋಟಿ ಹಣವಿದೆ. ಕಾರ್ಯಕ್ರಮ ಆಯೋಜಿಸದ ಕಾರಣ ಪ್ರತಿ ವರ್ಷದ ಅನುದಾನ, ಬಡ್ಡಿಯ ಹಣ ಜಮಾ ಆಗುತ್ತಿದೆ.

ಚಟುವಟಿಕೆಗಳೇ ಇಲ್ಲ: ಕವಿ ಚಕ್ರವರ್ತಿ ರನ್ನ ಪ್ರತಿಷ್ಠಾನ ಮತ್ತು ನಾಟಕಕಾರ ಪಿ.ಬಿ. ದುತ್ತರಗಿ ಟ್ರಸ್ಟ್‌ಗೆ ರಾಜ್ಯ ಸರ್ಕಾರವು ಎರಡು ವರ್ಷಗಳಿಂದ ಅಧ್ಯಕ್ಷ, ಸದಸ್ಯರ ನೇಮಕಾತಿ ಮಾಡಿಲ್ಲ. 'ಈ ಹಿಂದೆ ದುತ್ತರಗಿ ಟ್ರಸ್ಟ್‌ನಿಂದ ನಾಟಕೋತ್ಸವ, ವಿಚಾರ ಸಂಕಿರಣದಂತಹ ಕಾರ್ಯಕ್ರಮ ಆಯೋಜಿಸಲಾಗುತಿತ್ತು. ಆಗ ಸದಸ್ಯರಾಗಿದ್ದವರು, ಕಾರ್ಯಕ್ರಮ ಆಯೋಜನೆ ಜವಾಬ್ದಾರಿ ಮತ್ತು ಅನುದಾನ ತಮಗೇ ನೀಡುವಂತೆ ಪಟ್ಟು ಹಿಡಿದಿದ್ದರು. ಆದರೆ, ಸದಸ್ಯ-ರಿಗೆ ಅನುದಾನ ನೀಡಲು ಅವಕಾಶವಿಲ್ಲ. ಈ ಎಲ್ಲಾ ಕಾರಣಗಳಿಂದ ಅನುದಾನ ಖರ್ಚು ಮಾಡಲು ಸಾಧ್ಯವಾಗಿಲ್ಲ' ಎಂದು ಅಧಿಕಾ-ರಿಯೊಬ್ಬರು ತಿಳಿಸಿದರು.

ಪ್ರದಾನವಾಗದ ಪ್ರಶಸ್ತಿ: ಬಯಲಾಟ ಅಕಾಡೆಮಿಯ ಕೇಂದ್ರ ಕಚೇರಿ ಬಾಗಲಕೋಟೆಯಲ್ಲಿದೆ. ಹಿಂದೆ ಅಧ್ಯಕ್ಷರಾಗಿದ್ದ ಅಜಿತ್ ಬಸಾಪುರ 2021, 2022ನೇ ಸಾಲಿನ ಗೌರವ (?50 ಸಾವಿರ ನಗದು), ವಾರ್ಷಿಕ (?25 ಸಾವಿರ ನಗದು) ಪ್ರಶಸ್ತಿ ಪ್ರಕಟಿಸಿ ಎರಡು ವರ್ಷಗಳಾಗಿವೆ. ಇದುವರೆಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಿಲ್ಲ.

'ಅಕಾಡೆಮಿ ಅಧ್ಯಕ್ಷರಾಗಿ ದುರ್ಗದಾಸ್ ಹಾಗೂ ಸದಸ್ಯರ ನೇಮಕವಾಗಿದೆ. ಆದರೂ, ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜನೆ ನೆರವೇರಿಲ್ಲ. 2023 ಮತ್ತು 2024ನೇ ಸಾಲಿನ ಪ್ರಶಸ್ತಿಗಳಿಗೂ ಸಾಧಕರನ್ನು ಆ ಂ ು ್ಕ ೆ ಂ ು ್ ಾ ಗ ಬ ೇ ಕಿ ದ್. ಅಕಾಡೆಮಿಯಿಂದ ಬಯಲಾಟ ಕುರಿತು ಚಟುವಟಿಕೆಗಳೂ ಕುಂಠಿತಗೊಂಡಿವೆ' ಎಂದು ಮೂಲಗಳು ತಿಳಿಸಿವೆ.

9 ವರ್ಷಗಳಿಂದ ನಡೆದಿಲ್ಲ ಉತ್ಸವ ಬೆಳಗಾವಿಯಲ್ಲಿ ಕಿತ್ತೂರು ಉತ್ಸವ, ಬಳ್ಳಾ-ರಿಯಲ್ಲಿ ಹಂಪಿ ಉತ್ಸವ ಸೇರಿ ವಿವಿಧ ಜಿಲ್ಲೆಗಳಲ್ಲಿ ಉತ್ಸವಗಳು ನಡೆದಿವೆ. ಆದರೆ, ಬಾಗಲಕೋಟೆ ಜಿಲ್ಲೆಯಲ್ಲಿ ಚಾಲುಕ್ಯ ಉತ್ಸವ 9 ವರ್ಷಗಳಿಂದ ನಡೆದಿಲ್ಲ.

# ಹುಬ್ಬಳ್ಳಿ: ಸಮಸ್ಯೆಗಳ ನಡುವೆಯೇ ನಿತ್ಯದ ಬದುಕು



**ಹುಬ್ಬಳ್ಳಿ:** ಕಿರಿದಾದ ಮಣ್ಣಿನ ರಸ್ತೆಗಳು, ಚರಂಡಿ ವ್ಯವಸ್ಥೆ ಇಲ್ಲ. ಪದೇ ಪದೇ ರಸ್ತೆಯಲ್ಲಿಯೇ ಹರಿಯುವ ಗಟಾರದ ಕೊಳಚೆ ನೀರು, ಮಳೆಗಾಲದ ವೇಳೆ ಮನೆಯೊಳಗೆ ನುಗ್ಗುವ ಗಲೀಜು ನೀರು, ರಸ್ತೆ ಬದಿಯಲ್ಲಿಯೇ ತ್ಯಾಜ್ಯದ ರಾಶಿ, ಸಂಜೆಯಾಗುತ್ತಿದ್ದಂತೆ ಸೊಳ್ಳೆಗಳ ಹಾವಳಿ, ಕೊಳಚೆ ನೀರು ಮಿಶ್ರಿತ ಕುಡಿಯುವ ನೀರು ಪೂರೈಕೆ, ಪಾಲಿಕೆಗೆ ಸಕಾಲಕ್ಕೆ ತೆರಿಗೆ ಪಾವತಿಸಿದರೂ ಸಿಗದ ಮನೆಯ ಹಕ್ಕುಪತ್ರ.

?ಇದು ಹು?ಧಾ ಮಹಾನಗರ ಪಾಲಿಕೆ ವ್ಯಾಪ್ತಿಯ 49 ವಾರ್ಡ್‌ನಲ್ಲಿನ ಹನುಮಂತ ನಗರ, ಶೆಟ್ಟರ ಲೇಔಟ್, ಶಕ್ತಿ ಕಾಲೊನಿ ಸೇ-ರಿದಂತೆ ಲಿಂಗರಾಜ ನಗರದ ಸುತ್ತಮುತ್ತಲಿನ ಕೊಳಚೆ ಪ್ರದೇಶಗಳ ಸ್ಥಿತಿ. ಇಲ್ಲಿನ ನಿವಾಸಿಗಳು ಇಂತಹ ಹಲವು ಸಮಸ್ಯೆ, ಕೊರತೆಗಳ ನಡುವೆಯೇ ನಿತ್ಯ ಬದುಕು ಸಾಗಿಸುತ್ತಿದ್ದಾರೆ.

ಹನುಮಂತ ನಗರದಲ್ಲಿ 300ಕ್ಕೂ ಅಧಿಕ ಕುಟುಂಬಗಳು 25 ವರ್ಷಗಳಿಂದ ವಾಸವಾಗಿವೆ. ಹಲವು ವರ್ಷಗಳಿಂದ ಇಲ್ಲಿನ ನಿವಾಸಿಗಳು ಪಾಲಿಕೆಗೆ ಸಕಾಲಕ್ಕೆ ಆಸ್ತಿ ತೆರಿಗೆ ಪಾವತಿಸುತ್ತಲೇ ಬಂದಿದ್ದಾರೆ. ಆದರೆ, ಇಂದಿಗೂ ಇವರಿಗೆ ಪಾಲಿಕೆಯಿಂದ ಅಧಿಕೃತವಾದ ಡೋರ್ ನಂಬರ್, ನಿವಾಸಿ ಹಕ್ಕುಪತ್ರ ದೊರೆತಿಲ್ಲ. ಇವರ ಬಳಿ ಆರಂಭದಲ್ಲಿ ನಿವೇಶನಕ್ಕೆ ಸಂಬಂಧಿಸಿದ ಹೊಲದ ಮಾಲೀಕರು ನೀಡಿದ ಜಾಗದ ಪತ್ರ ಮಾತ್ರವಿದೆ.

ಬುಡಕಟ್ಟು, ಶೋಷಿತ ಹಾಗೂ ಅಲ್ಪ ಸಮುದಾಯಕ್ಕೆ ಸೇರಿದ ಜನರು ಇಲ್ಲಿ ವಾಸವಾಗಿದ್ದಾರೆ. ಬಹುತೇಕರು ನಿತ್ಯ ಕೂಲಿ ಮಾಡಿಯೇ ಜೀವನ ಸಾಗಿಸುತ್ತಿದ್ದಾರೆ. ಚಿಕ್ಕ ಚಿಕ್ಕ ಮನೆಗಳಲ್ಲಿ ವಾಸವಾಗಿರುವ ಇವರಿಗೆ ಶುದ್ಧ ಕುಡಿಯುವ ನೀರು ಎನ್ನುವುದು ಸಹ ಮರೀಚಿಕೆಯಾಗಿದೆ.

'ಚರಂಡಿ ವ್ಯವಸ್ಥೆ ಇಲ್ಲದ ಕಾರಣ. ಮನೆಯ ತ್ಯಾಜ್ಯದ ನೀರು, ಶೌಚಾಲಯದ ನೀರಿನ ಪೈಪ್‌ಗಳನ್ನು ನೇರವಾಗಿ ಒಳಚರಂಡಿಗೆ ಅಳವಡಿಸಲಾಗಿದೆ. ಇದರಿಂದಾಗಿ ಆಗಾಗ ಗಟಾರ ತುಂಬಿ, ಹೊರಗೆ ಹ-ರಿಯುತ್ತದೆ. ಕೆಲವೊಮ್ಮೆ ಕುಡಿಯುವ ನೀರು ಸರಬರಾಜು ಮಾಡುವ ಪೈಪ್‌ನೊಳಗೆ ಕೊಳಚೆ ನೀರು ಸೇರುವುದರಿಂದ ಗಲೀಜು ನೀರು ಪೂರೈಕೆಯಾಗುತ್ತದೆ. ಕುಡಿಯಲು, ಬಳಕೆಗೆ ಯೋಗ್ಯವಾಗಿರುವುದಿಲ್ಲ' ಎಂದು ಇಲ್ಲಿನ ನಿವಾಸಿಗಳಾದ ಈರಮ್ಮ ಗಂಗಮ್ಮ ಮಡಿವಾಳ, ಸುಭದ್ರಮ್ಮ, ನಾಗರಾಜ, ದೇವೇಂದ್ರಪ್ಪ ಪಾರಗಿ ದೂರುತ್ತಾರೆ.

'25 ವರ್ಷಗಳಿಂದ ವಾಸವಾಗಿದ್ದು, 10 ವರ್ಷಗಳಿಂದ ಪಾಲಿಕೆಗೆ ಆಸ್ತಿ ತೆರಿಗೆ ಪಾವತಿಸುತ್ತಿದ್ದೇವೆ. ಇಂದಿಗೂ ನಮಗೆ ಪಾಲಿಕೆಯಿಂದ ಅಧಿಕೃತವಾದ ಡೋರ್ ನಂಬರ್, ಹಕ್ಕುಪತ್ರ ಸಿಕ್ಕಿಲ್ಲ. ರಸ್ತೆ, ಚರಂಡಿ ವ್ಯವಸ್ಥೆ, ಶುದ್ಧ ಕುಡಿಯುವ ನೀರು ಸೇ-ರಿದಂತೆ ಅಗತ್ಯ ಮೂಲಸೌಲಭ್ಯಗಳು ಸಿಗುತ್ತಿಲ್ಲ' ಎಂದು ದೂರುತ್ತಾರೆ ಹನುಮಂತ ನಗರದ ನಿವಾಸಿ ನಾರಾಯಣ ಲಕ್ಷ್ಮಣ ಕೊಪ್ಪಳ.

'ಸಿಮೆಂಟ್, ಡಾಂಬರ್ ರಸ್ತೆ ಹಾಗೂ ವ್ಯವಸ್ಥಿತವಾದ ಚರಂಡಿ ನಿರ್ಮಿಸಿಕೊಡಿ ಎಂದು ಹಲವು ಬಾರಿ ಪಾಲಿಕೆ ಸದಸ್ಯರಲ್ಲಿ ಮನವಿ ಮಾಡಲಾಗಿದೆ. ಇಂದಿಗೂ ಪ್ರಯೋಜನವಾಗಿಲ್ಲ. ಮಳೆಗಾಲದಲ್ಲಿ ಇಲ್ಲಿ ಓಡಾಡಲು ಕಷ್ಟವಾಗುತ್ತದೆ' ಎಂದು ಶೆಟ್ಟರ ಲೇಔಟ್‌ನ ನಿವಾಸಿ ರಾಜು ಅಸಮಾಧಾನ ವ್ಯಕ್ತಪಡಿಸಿದರು.

# ದಲಿತ ಸಿಎಂ ವಿಚಾರ ಹೈಕಮಾಂಡ್‌ಗೆ ಬಿಟ್ಟಿದ್ದು: ಕೆ.ಎಚ್.ಮುನಿಯಪ್ಪ



**ಕೋಲಾರ:** 'ದಲಿತ ಮುಖ್ಯಮಂತ್ರಿ ಮಾಡುವ ವಿಚಾರವನ್ನು ಹೈಕಮಾಂಡ್ ವಿವೇಚನೆಗೆ ಬಿಡೋಣ. ನಾನು ಮುಖ್ಯಮಂತ್ರಿ ಆಕಾಂಕ್ಷಿಯಲ್ಲ. ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ' ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಎಲ್ಲಾ ಶಾಸಕರು, ಸಚಿವರು ಒಗ್ಗಟ್ಟಾಗಿ ನಿಂತು ಅವರ ಕೈ ಬಲಪಡಿಸುವೆವು. ಜೊತೆಗೆ ಬಿಜೆಪಿಯ ಹುನ್ನಾರಗಳಿಗೆ ಪಾಠ ಹೇಳುವ ಶಕ್ತಿಯನ್ನೂ ನೀಡುತ್ತೇವೆ' ಎಂದರು.

'ಮುಖ್ಯಮಂತ್ರಿ ಸ್ಥಾನದಿಂದ ಇಳಿಯುವಂತಹ ಪರಿಸ್ಥಿತಿ ಸಿದ್ದರಾಮಯ್ಯ ಅವರಿಗೆ ಎಂದಿಗೂ ಬರುವುದಿಲ್ಲ. ಒಂದು ವೇಳೆ ಬಂದರೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಲಿದೆ' ಎಂದು ಹೇಳಿದರು.

'ಮಲ್ಲಿಕಾರ್ಜುನ ಖರ್ಗೆ ಅವರ ಕಾಲದಿಂದಲೂ ದಲಿತ ಮುಖ್ಯಮಂತ್ರಿ ಕೂಗು ಕೇಳಿ ಬರುತ್ತಲೇ ಇದೆ. ಈವರೆಗೆ ಮಾಡಿಲ್ಲ. ಆದರೆ, ಈ ಬಗ್ಗೆ ಯಾರೂ ಮಾತನಾಡಬಾರದು ಎಂದು ಹೈಕಮಾಂಡ್ ಸೂಚಿಸಿದೆ. ಹೀಗಾಗಿ, ನಾನೂ ಮಾತನಾಡುವುದಿಲ್ಲ' ಎಂದರು.

ಸಚಿವರಾದ ಸತೀಶ ಜಾರಕಿಹೊಳಿ, ಜಿ.ಪರಮೇಶ್ವರ, ಡಾ.ಎಚ್.ಸಿ.ಮಹದೇವಪ್ಪ ಗೋಪ್ಯ ಸಭೆ ನಡೆಸಿರುವುದರ ಬಗ್ಗೆ ಪ್ರತಿಕ್ರಿಯಿಸಿ, ಖರ್ಗೆ ಬಳಿಕ ಇರುವ ಹಿರಿಯರು ಯಾರು ಎಂದು ಪ್ರಶ್ನಿಸಿದರು.

'ಚಿತ್ರದುರ್ಗದಲ್ಲಿ ನಡೆದಿದ್ದ ಐಕ್ಯತಾ ಸಮಾವೇಶದಿಂದಲೂ ಪರಿಶಿಷ್ಟ ಜಾತಿ ಹಾಗೂ ಪಂಗಡದವರು ಸಂಪೂರ್ಣವಾಗಿ ನಮ್ಮೊಂದಿಗೆ ಇದ್ದಾರೆ. ಹೀಗಾಗಿಯೇ, ನಮಗೆ 136 ಸ್ಥಾನಗಳು ಬಂದಿದ್ದು, ಸರ್ಕಾರ ರಚಿಸಿದ್ದೇವೆ' ಎಂದು ಹೇಳಿದರು.

'ಜಾತಿ ಗಣತಿ ವಿಚಾರವು ಸಂಪುಟದಲ್ಲಿ ಚರ್ಚೆಯಾಗಬೇಕಿದ್ದು, ಗಣತಿಯಿಂದಾಗಿ ಯಾವ ಸಮುದಾಯಕ್ಕೂ ಅನ್ಯಾಯವಾಗಲು ಅವಕಾಶವಿರುವುದಿಲ್ಲ. ಹಿಂದುಳಿದ ವರ್ಗದಲ್ಲಿ ನೂರಾರು ಉಪಜಾತಿಗಳಿವೆ. ಅವರಿಗೆಲ್ಲ ನ್ಯಾಯ ಸಿಗಲು ಅಂಕಿಅಂಶಗಳು ಇರಬೇಕು. ಸದ್ಯ ಅಲ್ಲಿಯೂ ಕೆಲವೇ ಕೆಲವರು ಪ್ರಯೋಜನ ಪಡೆದುಕೊಳ್ಳುತ್ತಿದ್ದು, ಎಲ್ಲರಿಗೂ ಸಿಗುತ್ತಿಲ್ಲ. ಹೀಗಾಗಿ, ಜಾತಿ ಗಣತಿ ಆರೋಗ್ಯಕರವಾಗಿರುತ್ತದೆಯೇ ಹೊರತು ಯಾರಿಗೂ ತೊಂದರೆಯಾಗುವುದಿಲ್ಲ. ಈ ಬಗ್ಗೆ ಸಂಶಯ ಬೇಡ. ಚರ್ಚೆಯಾದ ಬಳಿಕ ಏನಾದರೂ ಲೋಪದೋಷಗಳಿದ್ದರೆ ಸರಿಪಡಿಸಿಯೇ ಜಾರಿ ಮಾಡಲಾಗುವುದು' ಎಂದರು. 'ಈ ವಿಚಾರವಾಗಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಪ್ರಶ್ನೆಗೆ ಉತ್ತರ ನೀಡಲು ನಾನು ಈಗ ತಯಾರಿಲ್ಲ. ಕಾರಣ ಸಚಿವ ಸಂಪುಟದಲ್ಲಿ ಚರ್ಚೆಯಾಗಿ, ಅದರ ಸಾಧಕ ಬಾಧಕ ತಿಳಿದುಕೊಳ್ಳಬೇಕಿದೆ. ಆ ಬಳಿಕ ಮಾತನಾಡುವೆ' ಎಂದು ನುಡಿದರು.

